# ಯುಗರಶ್ಮಿ

ಭೂಲೋಕದಲ್ಲಿ ಶಾಂತಿ ಮತ್ತು ಇಸ್ಲಾಮಿನ ಉಪದೇಶಗಳು
ದೇವರನ್ನು ಕಾಣಬಹುದೇ ?
ಲಂಡನಿನ ಅಂತಾರಾಷ್ಟ್ರೀಯ ಮುಸ್ಲಿಮ್ ಸಮ್ಮೇಳನ
ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?

ತ್ರೈಮಾಸಿಕ

ಜೂನ್ 1976

ಇಹ್‌ಸಾನ್ 1355

ಬೆಲೆ : ರೂ. 1—00

ಸತ್ಕರ್ಮ ನಿರತರಿಗೆ ಅತ್ಯುತ್ತಮ ಪ್ರತಿಫಲ ಅಧಿಕವಾಗಿ ದೊರೆಯುವುದು. ಅವರ ಮುಖಗಳಲ್ಲಿ ಮಾಲಿನ್ಯವಾಗಲೀ ಅಪಮಾನದ ಚಿಹ್ನೆಯಾಗಲೀ ಗೋಚರಿಸಲಾರವು. ಅವರು ಸ್ವರ್ಗದಲ್ಲಿ ಸ್ಥಿರವಾಸ ಮಾಡುವರು.

—ಪವಿತ್ರ ಖುರ್‌ಆನ್ (10 : 27)

# ಯುಗರಶ್ಮಿ


ತ್ರೈಮಾಸಿಕ

23 / 1008, ಅನ್ಸಾರಿ ರೋಡ್,

ಬಂದರ್, ಮಂಗಳೂರು – 575001.

ಸಂಪುಟ: 2 ಸಂಚಿಕೆ: 1

ಎಪ್ರಿಲ್ — ಜೂನ್ 1976 / ಶಹಾದತ್ — ಇಹ್‌ಸಾನ್ 1355

ಸಂಪಾದಕ : ಮುಹಮ್ಮದ್ ಯೂಸುಫ್

ಬಿಡಿ ಪ್ರತಿ : ಒಂದು ರೂಪಾಯಿ. ವಾರ್ಷಿಕ ಚಂದಾ : ನಾಲ್ಕು ರೂಪಾಯಿಗಳು.


## ವಿಷಯ ಸೂಚಿಕೆ :


ಸಂಪಾದಕೀಯ

ಹಝ್ರತ್ ಅಹ್ಮದರ ಉಪದೇಶಗಳು

ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

ಭೂಲೋಕದಲ್ಲಿ ಶಾಂತಿ ಮತ್ತು ಇಸ್ಲಾಮಿನ ಉಪದೇಶಗಳು

ದೇವರನ್ನು ಕಾಣಬಹುದೇ ?

ಲಂಡನಿನ ಅಂತಾರಾಷ್ಟ್ರೀಯ ಮುಸ್ಲಿಮ್ ಸಮ್ಮೇಳನದಲ್ಲಿ ರಾಜಕುಮಾರ ಮುಹಮ್ಮದುಲ್ ಫೈಸಲ್‌ರ ಭಾಷಣ

ಈಸಾನಬಿಯ (ಯೇಸುಕ್ರಿಸ್ತರ) ವಯಸ್ಸು 130

ಅಹ್ಮದಿಯಾ ವಾರ್ತೆಗಳು

ಪುಸ್ತಕ ವಿಭಾಗ — ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?

ಸಂಪಾದಕರಿಗೆ ಪತ್ರ

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 2 | ಎಪ್ರಿಲ್ – ಜೂನ್ 1976 / ಶಹಾದತ್ – ಇಹ್‌ಸಾನ್ 1355 | ಸಂಚಿಕೆ: 1

ಈ ಸಂಚಿಕೆಯೊಂದಿಗೆ 'ಯುಗರಶ್ಮಿ'ಯು ತನ್ನ ಎರಡನೆಯ ವರ್ಷಕ್ಕೆ ಕಾಲಿರಿಸಿದೆ. 'ಯುಗರಶ್ಮಿ'ಗೆ ಅನೇಕ ಎಡರು ತೊಡರುಗಳಿವೆಯಾದರೂ ಅದರದೇ ಆದ ಗತಿಯಲ್ಲಿ ಮುನ್ನಡೆಯುತ್ತಿದೆ. ಇಸ್ಲಾಮಿನ ಕುರಿತಿರುವ ಅನೇಕ ತಪ್ಪಭಿಪ್ರಾಯಗಳಲ್ಲಿ ಕೆಲವನ್ನಾದರೂ ನೀಗಿಸಿ ಅದರ ಯಥಾರ್ಥತೆಯೇನೆಂದು ಅಹ್ಮದಿಯತ್ತಿನ ಪ್ರಕಾಶದಲ್ಲಿ ವಿವರಿಸಿ ಕೊಡುವ ಕಾರ್ಯದಲ್ಲಿ 'ಯುಗರಶ್ಮಿ' ಕಿಂಚಿತ್ತನ್ನು ಸಾಧಿಸಿದೆ. ಈ ಸಂದರ್ಭದಲ್ಲಿ ನಾವು ಪರಮಾತ್ಮನನ್ನು ವಂದಿಸುವುದರೊಂದಿಗೆ, ವಾಚಕ ಮಹಾಶಯರಿಗೂ ಜಾಹಿರಾತುದಾರರಿಗೂ ಹಿತೈಷಿಗಳಿಗೂ, ಮುಖ್ಯವಾಗಿ ನಮ್ಮ ಪತ್ರಿಕೆಯನ್ನು ಪರಾಮರ್ಶಿಸಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಯೋಗ್ಯ ಸಲಹೆಗಳನ್ನಿತ್ತ ಕರ್ನಾಟಕದ ಪತ್ರಿಕೆಗಳಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ನಮ್ಮ ಕಾರ್ಯದಲ್ಲಿ ಇನ್ನು ಮುಂದಕ್ಕೂ ಸಫಲರಾಗಲು ನಾವು ದೈವ ಸಹಾಯವನ್ನು ಯಾಚಿಸುವುದರೊಂದಿಗೆ ವಾಚಕರ, ಜಾಹಿರಾತುದಾರರ, ಹಿತೈಷಿಗಳ ಹಾಗೂ ಪತ್ರಿಕೆಗಳ ಅಮೂಲ್ಯ ಸಹಕಾರವನ್ನು ಕೋರುತ್ತೇವೆ.

—ಸಂಪಾದಕ.

# ಹಝ್ರತ್ ಅಹ್ಮದರ ಉಪದೇಶಗಳು

ಈ ಲೋಕದ ಶಾಪಗಳ ಕುರಿತು ನೀವು ಹೆದರದಿರಿ. ಅವು ಬೇಗನೆ ನಿವಾರಿಸಲ್ಪಡುವಂತಹವು. ಅವು ಹೊಗೆಯಂತಿದ್ದು ನಿಮ್ಮ ಹಗಲನ್ನು ಇರುಳನ್ನಾಗಿ ಪರಿವರ್ತಿಸಲು ಅವಕ್ಕೆ ಸಾಧ್ಯವಿಲ್ಲ. ಆದರೆ ಮೇಲಿನ ಲೋಕದಿಂದ ಬರುವ ದೈವಶಾಪಕ್ಕೆ ಹೆದರಿರಿ; ಅದು ಇಹದಲ್ಲೂ ಪರದಲ್ಲೂ ವಿನಾಶಕಾರಿಯಾಗಿದೆ. ಅದಕ್ಕೆ ಗುರಿಯಾಗುವವರು ಎರಡು ಲೋಕಗಳಲ್ಲೂ ನಷ್ಟವನ್ನು ಅನುಭವಿಸುವರು. ಕಪಟ ಭಕ್ತಿಯಿಂದ ರಕ್ಷಿಸಲ್ಪಡಬಹುದೆಂದು ನೀವು ಭಾವಿಸಬೇಡಿರಿ. ಕಾರಣವೇನೆಂದರೆ ನಿಮ್ಮ ಸೃಷ್ಟಿಕರ್ತ ನಿಮ್ಮ ಹೃದಯದ ಅಡಿಭಾಗದಲ್ಲಿ ನೆಲೆಸಿರುವ ರಹಸ್ಯಗಳನ್ನು ಸಹ ಕಾಣುವನು. ಅವನನ್ನು ವಂಚಿಸಲು ನಿಮಗೆ ಸಾಧ್ಯವಿದೆಯೇ? ಆದುದರಿಂದ ನೀವು ಅವನ ಮುಂದೆ ನೇರಾಗಿ ನಿಲ್ಲಿರಿ. ನಿಮ್ಮ ಹೃದಯಗಳಲ್ಲಿರುವ ಕಲ್ಮಶಗಳನ್ನೆಲ್ಲಾ ಸ್ವಚ್ಛಗೊಳಿಸಿ ಅವನ್ನು ಯಾವಾಗಲೂ ಶುಚಿಯಾಗಿಡಿರಿ. ಅಲ್ಪವಾವ ಒಂದು ಕಲೆ ನಿಮ್ಮಲ್ಲಿ ಬಾಕಿಯಾಗುವುದಾದರೆ, ಅದು ನಿಮ್ಮ ಬೆಳಕನ್ನು ನಂದಿಸಿ, ಅನಂತರ ಸರ್ವವನ್ನೂ ಅಂಧಕಾರಮಯವನ್ನಾಗಿ ಮಾಡುವುದು.



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ**
**ಗುಲಾಮ್ ಅಹ್ಮದ್**

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ನಿಮ್ಮ ಮನೆಗಳಲ್ಲಿ ಅಲ್ಲಾಹುವಿಗೆ ಹೆಚ್ಚು ಪ್ರೀತಿಯುಳ್ಳದ್ದು ಒಂದು ಅನಾಥ ಶಿಶುವಿಗೆ ಗೌರವದ ಸ್ಥಾನ ಲಭಿಸುವ ಮನೆಯಾಗಿದೆ.

2. ಒಂದು ಅನಾಥ ಮಗುವಿನೊಡನೆ ದಯೆಯಿಂದ ವರ್ತಿಸುವ ಕುಟುಂಬವು ಅತ್ಯಂತ ಉತ್ತಮವಾದುದು. ಅನಾಥ ಮಗುವಿನೊಡನೆ ನಿರ್ದಯವಾಗಿ ವರ್ತಿಸುವ ಕುಟುಂಬವು ಹೀನವಾದುದು.

3. ವಿನಯಭಾವವು ಸತ್ಯ ವಿಶ್ವಾಸದ ಒಂದು ಭಾಗವಾಗಿದೆ.

4. ಲಜ್ಜೆ ಮತ್ತು ಮಿತ ಭಾಷಣ ಸತ್ಯ ವಿಶ್ವಾಸದ ಎರಡು ಸವಿಶೇಷತೆಗಳಾಗಿವೆ. ಅಹಂಕಾರ ಮತ್ತು ಅಮಿತ ಭಾಷಣ ಕಪಟ ವಿಶ್ವಾಸದ ಲಕ್ಷಣಗಳಾಗಿವೆ.

5. ಉದ್ದೇಶರಹಿತವೂ ನಿಷ್ಫಲವೂ ಆದುದನ್ನು ಕೈಬಿಡುವುದು ಇಸ್ಲಾಮಿಗೆ ತಕ್ಕುದಾಗಿದೆ.

6. ಸಾಲ ಕೊಡುವುದು ದಾನದ ಒಂದು ಭಾಗವಾಗಿದೆ.

7. ತನ್ನ ಸಾಲಗಳನ್ನು ತೀರಿಸುವುದರಲ್ಲಿ ನಿಷ್ಠೆಯುಳ್ಳವನು ನಿಮ್ಮ ಪೈಕಿ ಉತ್ತಮನು.

8. ನೀವು ಸಾಲ ಪಡೆದುಕೊಳ್ಳುವ ಒಂದು ಸೂಜಿಯನ್ನೂ ನೂಲನ್ನು ಸಹ ವಾಪಸು ಕೊಡುವುದರ ಕುರಿತು ಭರವಸೆಯನ್ನೀಯಿರಿ.

9. ಬಂಧುತ್ವವನ್ನು ಶಕ್ತಿಪಡಿಸಿರಿ; ಒಂದು ಸಲಾಮಿನಿಂದ ಮಾತ್ರವಾದರೂ ಸರಿ.

10. ಬಡವರಿಗೆ ನೀಡುವ ದಾನವು ಒಂದು ದಾನ ಮಾತ್ರವಾಗಿದೆ. ತನ್ನ ಸಂಬಂಧಿಕನಿಗೆ ನೀಡುವ ದಾನಕ್ಕೆ ಎರಡು ಗುಣಗಳಿವೆ. ಅದು ಒಂದು ದಾನವೂ ಆಯಿತು, ಒಳ್ಳೆಯ ಬಂಧುತ್ವವೂ ಆಯಿತು.



# ಭೂಲೋಕದಲ್ಲಿ ಶಾಂತಿ ಮತ್ತು ಇಸ್ಲಾಮಿನ ಉಪದೇಶಗಳು

**ಮೌಲವಿ ಮುಹಮ್ಮದ್ ಉಮರ್ ಸಾಹೆಬ್ H. A.**

ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದ ಆಶ್ಚರ್ಯಕರವಾದ ಅಭಿವೃದ್ಧಿಯಿಂದ ಹಲವಾರು ಉಪಯೋಗಕರ ಆವಿಷ್ಕಾರಗಳು ಉಂಟಾಗಿದ್ದರೂ ಜೊತೆಯಲ್ಲಿಯೇ ವಿನಾಶಕರವಾದ ಆಯುಧಗಳ ಭಂಡಾರಗಳೂ ಸಿದ್ಧವಾಗುತ್ತಿವೆ. ಮಾರಕಾಯುಧಗಳ ತಯಾರಿಕೆಯ ನಿರಂತರ ಓಟವು ಪ್ರಾರಂಭವಾಗಿದೆ. ಅಣುಶಕ್ತಿಯ ಮೇಲೆ ಮಾನವನಿಗಿರುವ ಸ್ವಾಧೀನತೆಯ ಕಾರಣದಿಂದ ಒಂದು ಭಯಂಕರ ಅಣುಯುದ್ಧವು ಭೂಲೋಕದ ಮೇಲೆ ತೂಗಾಡುತ್ತಿದೆ. ಕೆಲವರು ಮಾರಕಾಯುಧಗಳ ತಯಾರಿಕೆಯ ಮುನ್ನೋಟವು ಈ ಆಪತ್ತಿನಿಂದ ರಕ್ಷಣೆ ಹೊಂದುವ ದಾರಿಯೆಂದು ಭಾವಿಸಿರುವರು. ಯಥಾರ್ಥವಾಗಿ ಇದು ರಕ್ಷಾ ಮಾರ್ಗವಲ್ಲ.

ಲೋಕ ಶಾಂತಿಗಾಗಿ ಹಲವಾರು ಸ್ಥಳಗಳಲ್ಲಿ ಸಮ್ಮೇಲನಗಳು ನಡೆಯುತ್ತಿವೆ. ಪರಸ್ಪರ ಅರಿತುಕೊಳ್ಳುವುದರಿಂದ ಮಹಾಯುದ್ಧದ ಆಪತ್ತಿನಿಂದ ರಕ್ಷೆ ಪಡೆಯಲು ಇದರಿಂದ ಯತ್ನಿಸಲಾಗುತ್ತಿದೆ. ಈ ಸಮ್ಮೇಳನಗಳಲ್ಲಿ "ಕುಳಿತುಕೊಳ್ಳುವಿಕೆ, ಮಾತಾಡುವಿಕೆ ಮತ್ತು ಎದ್ದುಹೋಗುವಿಕೆಯ ಕಾರ್ಯಕಲಾಪಗಳು ನಡೆಯುತ್ತಿವೆ. ಇದರ ಪರಿಧಿಯನ್ನು ದಾಟುವಂತಹದೇನೂ ನಡೆಯುವುದಿಲ್ಲ. ಈ ಎಲ್ಲಾ ಪ್ರಯತ್ನಗಳು ಪರಾಜಯಗೊಳ್ಳುವುದರ ನಿಜವಾದ ಕಾರಣ ಹೃದಯಗಳಲ್ಲಿ ಪರಸ್ಪರವಿರುವ ದ್ವೇಷಾಸೂಯೆಗಳಾಗಿವೆ. ಹೃದಯಗಳನ್ನು ಶುದ್ಧೀಕರಿಸುವ ವರೆಗೆ ಪ್ರಪಂಚದಿಂದ ಇಂತಹ ಅಪಾಯಗಳು ದೂರವಾಗಲಾರವು. ಬರೇ ಮಾತಿನಿಂದೇನೂ ಪ್ರಯೋಜನವಿಲ್ಲ. ಕಾರ್ಯರೂಪ ...ಲ್ಲ ಏನಾದರೂ ಮಾಡುವುದು ಅಗತ್ಯವಾಗಿದೆ. ಇತರರಿಗೆ ಮಾರ್ಗದರ್ಶಿಯಾದ ಕಾರ್ಯಮಾಡಿ ತೋರಿಸುವುದು ಅತ್ಯಗತ್ಯವಾಗಿದೆ.

ಇಂತಹ ದಿಗ್ಭ್ರಮೆಗೊಳಿಸುವ ವಾತಾವರಣದಲ್ಲಿರುವ ಎಲ್ಲಾ ಸಹೃದಯಗಳಾದ ಮನುಷ್ಯರು ಇಂತಹ ಪರಿಸ್ಥಿತಿಯಿಂದ ರಕ್ಷೆ ಪ್ರಾಪಿಸಲಿರುವ ದಾರಿಯನ್ನು ಹುಡುಕಲು ಎದ್ದೇಳುತ್ತಾರೆ. ಪ್ರಪಂಚಕ್ಕೆ ಸ್ಥಿರವಾದ ಶಾಂತಿ ಯಾವಾಗ ಲಭಿಸುವುದೆಂಬುದನ್ನು ಇವರು ಪ್ರತೀಕ್ಷಿಸುತ್ತಾ ಇರುತ್ತಾರೆ.

ಲೋಕ ಶಾಂತಿಯ ಸಮಸ್ಯೆ ಬಹಳ ಪ್ರಮುಖವಾದುದಾಗಿದೆ. ಇದಕ್ಕಿರುವ ಮಾರ್ಗ ಇಸ್ಲಾಮ್ ತೋರಿಸಿಕೊಟ್ಟಿದೆ. ಇಸ್ಲಾಮಿನ ಸ್ಥಾಪಕರು ಉಪದೇಶಿಸಿದ ತತ್ವಗಳೂ ಮಾಡಿ ತೋರಿಸಿದ ಕಾರ್ಯ ವಿಧಾನವೂ ಪ್ರಪಂಚದಲ್ಲಿ ಶಾಂತಿ ನೆಲೆಗೊಳಿಸುವಂತಹ ಸುವ್ಯಕ್ತ ಮಾರ್ಗಗಳಾಗಿವೆ. ಇಸ್ಲಾಮ್ ಎಂಬ ಹೆಸರಿನ ಅರ್ಥ "ಶಾಂತಿ'' ಎಂದಾಗಿದೆ. ಈ ಧರ್ಮವು ಪ್ರಪಂಚಕ್ಕೆ ಶಾಂತಿಯನ್ನು ಕೊಡುವ ಮತವಾಗಿದೆ. ಇಸ್ಲಾಮನ್ನು ಪ್ರಪಂಚಕ್ಕೆ ಪರಿಚಯ ಮಾಡಿಕೊಟ್ಟ ದೇವರಿಗೆ ಅನೇಕಾನೇಕ ಗುಣಗಳಿವೆ. ಅವುಗಳಲ್ಲಿಯೊಂದರ ಅರ್ಥ "ಶಾಂತಿಯ ಉದ್ಭವ ಕೇಂದ್ರ"ವೆಂದಾಗಿದೆ. ಇಸ್ಲಾಮ್ ಧರ್ಮವಲಂಬಿಯ ಹೆಸರು ಮುಸ್ಲಿಮ್ ಎಂದಾಗಿದೆ. ಮುಸ್ಲಿಮನ ಗುಣಗಳನ್ನು ವಿವರಿಸುತ್ತಾ ಇಸ್ಲಾಮಿನ ಸ್ಥಾಪಕರು "ಒಬ್ಬ ಮುಸ್ಲಿಮನ ನಾಲಗೆಯಿಂದಾಗಲೀ ಕೈಗಳಿಂದಾಗಲೀ ಇತರರಿಗೆ ಯಾವುದೇ ತೊಂದರೆಯುಂಟಾಗದು'' ಎಂದು ಹೇಳಿರುವರು.

ಇಸ್ಲಾಮಿನ ಸ್ಥಾಪಕರು ಹದಿನಾಲ್ಕು ನೂರು ವರ್ಷಗಳ ಮೊದಲು ಇಸ್ಲಾಮಿನ ಪವಿತ್ರ ತತ್ವಗಳ ಮೂಲಕ ಶಾಂತಿಯುತ ಸಮಾಜವನ್ನು ಸೃಷ್ಟಿಸಿ ಮಾನವ

ರೆಲ್ಲರೂ ಅಭಿವೃದ್ಧಿ ಪಡೆಯಬೇಕೆಂಬ ಆಶೆ, ಸಹಾನುಭೂತಿ, ಸೇವೆ ಆ ಸಮಾಜದ ಪ್ರಧಾನ ಲಕ್ಷಣಗಳಾಗಿದ್ದುವು. ಪರಮಾದರಣೀಯರಾದ ಆ ಪ್ರವಾದಿಗಳು ತಮ್ಮ ಪರಿಶುದ್ಧ ಸಹವಾಸದ ಮತ್ತು ಅತ್ಯುತ್ಕೃಷ್ಟ ತತ್ವಗಳ ಸಹಾಯದಿಂದ ಆ ಕಾಲದ ಜನರ ಹೃದಯಗಳನ್ನು ಶುದ್ಧಿಗೊಳಿಸಿದರು. ಅನಂತರ ಪರಸ್ಪರ ನಿಜವಾದ ಪ್ರೀತ್ಯಾದರಗಳು ನೆಲೆಗೊಳ್ಳುವಂತೆ ಮಾಡಿದರು. ಇದರ ಪರಿಣಾಮವಾಗಿ ಅವರೆಲ್ಲರೂ ಮಾನವರ ಸೇವೆಗಾಗಿ ಮುನ್ನುಗ್ಗಿದರು. ಅವರಿಗೆ ಸೇವೆಯೇ ಸಂತೋಷವಾಗಿತ್ತು. ಅವರು ಇತರರಿಗೆ ಸುಖವನ್ನಿತ್ತು ತಾವು ಸುಖಿಗಳಾದರು.

ಪರಮಾದರಣೀಯರಾದ ಆ ಪ್ರವಾದಿಗಳು ಲೋಕಶಾಂತಿಯು ಭದ್ರವಾದ ಬುನಾದಿಯ ಮೇಲೆ ನೆಲೆಗೊಳ್ಳುವಂತೆ ಮಾಡಿದ ಉಪದೇಶಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

### ಸಮಾನತೆ

ಪವಿತ್ರ ಪ್ರವಾದಿಗಳ ಮಹೋಪದೇಶಗಳಲ್ಲಿ "ಸಮಾನತೆಯ" ತತ್ವವು ಪ್ರಧಾನವಾಗಿದೆ. ಈಗ ಭೂಲೋಕದಲ್ಲಿ ಶಾಂತಿಯು ನೆಲೆಸಲು ತಡೆಯಾಗಿರುವ ಕಾರಣಗಳಲ್ಲೊಂದು "ಸಮಾನತೆ"ಯ ತತ್ವವು ಕಡೆಗಣಿಸಲ್ಪಟ್ಟಿರುವುದಾಗಿದೆ.

ಇಸ್ಲಾಮ್ ಭೂಲೋಕದಲ್ಲಿ ಸಮಾನತೆ ಮತ್ತು ಐಕ್ಯದ ಕರೆ ನೀಡುತ್ತದೆ. ಇಸ್ಲಾಮ್ ಲೋಕಕ್ಕೆ ಪರಿಚಯ ಮಾಡಿಕೊಟ್ಟ ದೇವರ ಗುಣಗಳಲ್ಲೊಂದು "ಲೋಕಗಳ ಪಾಲಕ" ಎಂದಾಗಿದೆ. ಆತನು "ಬರೇ ಅರೇಬ್ಯದ ಪಾಲಕ" ಅಥವಾ "ಮುಸ್ಲಿಮರ ಪಾಲಕ" ಎಂಬ ಗುಣನಾಮ ಹೊಂದಿಲ್ಲ. ಆತನು ಎಲ್ಲಾ ಸೃಷ್ಟಿಗಳ, ಎಲ್ಲಾ ಮತಗಳ ಮತ್ತು ಎಲ್ಲದರ ದೇವರಾಗಿರುವನು. "ದೇವರೊಬ್ಬನೇ" ಎಂಬ ತತ್ವವನ್ನು ಸ್ವೀಕರಿಸುವುದರಿಂದ ಆತನ ಸೃಷ್ಟಿಗಳಾದ ನಮ್ಮಲ್ಲಿ ಐಕ್ಯದ ಮತ್ತು ಸ್ನೇಹದ ಚಿಲುಮೆ ಉಕ್ಕುವುದು. ಇಸ್ಲಾಮ್ ಧರ್ಮವು ಎಲ್ಲಾ ಜನಾಂಗಗಳಿಗೆ ಈ ವಿಷಯದ ಕುರಿತು ಒಂದು ಆಹ್ವಾನವಿತ್ತಿದೆ:

"ನಮ್ಮ ನಿಮ್ಮಲ್ಲಿ ಸಮಾನವಾಗಿರುವುದರ ಕುರಿತು ನಾವು ಒಂದಾಗುವ. ನಾವು ಏಕ ದೇವರನ್ನು ಆರಾಧಿಸುವ" ಎಂಬ ಕರೆ ನೀಡುವಂತೆ ಅದು ಉಪದೇಶಿಸುತ್ತದೆ.

ಇಸ್ಲಾಮಿನ ಸ್ಥಾಪಕರ ಈ ವಚನಗಳನ್ನು ಗಮನಿಸಿರಿ: "ಸೃಷ್ಟಿಯು ದೇವರ ಕುಟುಂಬವಾಗಿದೆ. ದೇವರ ಕುಟುಂಬವನ್ನು ಪ್ರೀತಿಸುವವನು ದೇವರಿಗೆ ಅತ್ಯಂತ ಪ್ರಿಯನು" ಈ ವಚನದಿಂದ ದೇವರು ತಂದೆಯಂತಿರುವನೆಂದೂ, ಸೃಷ್ಟಿಗಳು ಆತನ ಮಕ್ಕಳಂತೆಯೂ, ದೇವರ ಮಕ್ಕಳೊಡನೆ ಪ್ರೇಮದಿಂದ ವರ್ತಿಸುವವನು ದೇವರಿಗೆ ಅತ್ಯಂತ ಪ್ರಿಯನೆಂದೂ ವ್ಯಕ್ತವಾಗುತ್ತದೆ. ಪ್ರಪಂಚದ ಎಲ್ಲಾ ಜನರು ಸಮಾನ ಸ್ಥಾನ ಹೊಂದಿರುವರೆಂಬುದನ್ನು ನಾವು ಚೆನ್ನಾಗಿ ಗ್ರಹಿಸಬೇಕಾಗಿದೆ. ಪ್ರಪಂಚದಲ್ಲಿ ಅಶಾಂತಿಗಿರುವ ಕಾರಣಗಳಲ್ಲಿ ಜಾತಿ, ಕುಲ, ವರ್ಗಭೇದ ಹಾಗೆಯೇ ಕರಿಯರು, ಬಿಳಿಯರು ಎಂಬ ವರ್ಣಭೇಧ ಪ್ರಧಾನವಾಗಿವೆ. ಕುಲ ಮತ್ತು ಬಣ್ಣದ ಕಾರಣದಿಂದ ಯಾರೂ ಉತ್ತಮರು ಅಥವಾ ನೀಚರಾಗುವುದಿಲ್ಲ. ಈ ವ್ಯತ್ಯಾಸಗಳನ್ನು ದೂರೀಕರಿಸಲಿಕ್ಕಾಗಿ ಮತ್ತು ಐಕ್ಯತೆಯನ್ನು ಸೃಷ್ಟಿಸಲಿಕ್ಕಾಗಿ ಪವಿತ್ರ ಖುರ್ ಆನಿನಲ್ಲಿ ದೇವರು ಈರೀತಿ ಹೇಳಿರುವನು:—

"ಮಾನವರೇ, ನಾವು ನಿಮ್ಮನ್ನು ಗಂಡು ಹೆಣ್ಣುಗಳಾಗಿ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸುವಂತೆ ನಿಮ್ಮನ್ನು ಹಲವಾರು ಗುಂಪುಗಳನ್ನಾಗಿಯೂ, ವರ್ಗಗಳನ್ನಾಗಿಯೂ ಮಾಡಿದೆವು." (ಅಲ್ ಹುಜುರಾತ್ ವಚನ 14).

ಪರಮಾದರಣೀಯರಾದ ಪ್ರವಾದಿಗಳ ಈ ನುಡಿಯನ್ನು ಗಮನಿಸಿರಿ:

"ಯಾವ ಅರಬಿಗೂ ಅರಬಿಯಲ್ಲದವನ ಮೇಲೆ ಶ್ರೇಷ್ಠತೆಯಿಲ್ಲ. ಅದೇರೀತಿ ಯಾವುದೇ ಅರಬಿಯೇತರನಿಗೆ ಅರಬಿಯ ಮೇಲೆ ಶ್ರೇಷ್ಠತೆಯಿಲ್ಲ."

ಹಜ್ಜತುಲ್ ವಿದಾದಲ್ಲಿ ಪವಿತ್ರ ಪ್ರವಾದಿಯವರು ಮಾಡಿದ ಉಪದೇಶವು ಇದನ್ನೇ ಸುವ್ಯಕ್ತಗೊಳಿಸುತ್ತದೆ. ಆ ಸಮಯದಲ್ಲಿ ಪವಿತ್ರಪ್ರವಾದಿಯವರು ತಮ್ಮ ಎರಡು ಕೈಗಳನ್ನು ಮೇಲೆತ್ತಿ ಒಂದು ಕೈಯ ಬೆರಳುಗಳನ್ನು ಇನ್ನೊಂದು ಕೈಯ ಬೆರಳುಗಳೊಂದಿಗೆ ಸೇರಿಸಿ ಜನರಿಗೆ ತೋರಿಸುತ್ತಾ ಯಾವ ರೀತಿ ಒಂದು ಕೈಯ ಬೆರಳುಗಳು ಇನ್ನೊಂದು ಕೈಯ ಬೆರಳುಗಳಿಗೆ ಸಮಾನವಾಗಿವೆಯೋ ಅದೇ ರೀತಿ ಎಲ್ಲಾ ಜನರೂ ಸಮಾನರು, ಸಹೋದರರೆಂದು ಉಪದೇಶಿಸಿದರು.

ಮಾನವರ ಸಮಾನತೆಯ ಉಪದೇಶದ ಜೀವಂತ ನಿದರ್ಶನ ಮುಸ್ಲಿಮರ ಪ್ರಾರ್ಥನಾ ವಿಧಿಯಲ್ಲಿ ದೊರೆಯುತ್ತದೆ. ಪ್ರಾರ್ಥನೆಯಲ್ಲಿ, ಪ್ರಾರ್ಥನೆ ನಡೆಸುವ ಮುಂದಾಳುವಿನ ಹಿಂದುಗಡೆ ಎಲ್ಲಾ ಜನರು ತಮ್ಮ ಸ್ಥಾನಮಾನಗಳನ್ನು ಲೆಕ್ಕಿಸದೆ ಭುಜಕ್ಕೆ ಭುಜ ತಗಲಿಸಿ ನಿಲ್ಲುತ್ತಾರೆ.

## ಐಶ್ವರ್ಯ ಮತ್ತು ಬಡತನ

ಪ್ರಪಂಚದಲ್ಲಿ ಅಶಾಂತಿಯಿರುವ ಇನ್ನೊಂದು ಕಾರಣ ಐಶ್ವರ್ಯ ಮತ್ತು ಬಡತನದ ಪ್ರಶ್ನೆಯಾಗಿದೆ. ಇವೆರಡರ ಮಧ್ಯವಿರುವ ದೂರ ಮತ್ತು ದ್ವೇಷ ಇದಕ್ಕೆ ಕಾರಣವಾಗಿದೆ.

ಈ ಕಾಲದಲ್ಲಿ ನಾವು ಕೆಲವು ಮನೆಗಳಲ್ಲಿ ಐಶ್ವರ್ಯದ ಕಾರಣದಿಂದ ಸುಖ ಸಂತೋಷ ತುಂಬಿರುವುದು ಕಾಣುತ್ತೇವೆ. ಅವರ ನಾಯಿಗಳು ಸಹ ಬಿಸ್ಕೆಟು, ಹಾಲು ಮತ್ತು ಬೆಣ್ಣೆಗಳಿಂದ ಪೋಷಿಸಲ್ಪಡುತ್ತವೆ. ಅದೇ ಮನೆಗಳ ಸಮೀಪವಿರುವ ಇನ್ನೊಂದು ಮನೆಯಲ್ಲಿ ಮಕ್ಕಳು ಹಸಿವೆಯಿಂದ ಅಳುತ್ತಿರುವುದು ಕಾಣುತ್ತದೆ. ಆ ಮಕ್ಕಳ ತಂದೆ ತಾಯಿಗಳು ಹಸಿದು ಕಂಗಾಲಾಗಿರುತ್ತಾರೆ. ಐಶ್ವರ್ಯದಿಂದಿರುವ ಮನೆಯವರಿಗೆ ತಮ್ಮ ಬಡಪಾಯಿ ನೆರೆಕರೆಯವರ ಕುರಿತು ಯಾವುದೇ ಆಸಕ್ತಿಯಿರುವುದಿಲ್ಲ. ಅವರಿಗೆ ಅವರ ಕುರಿತು ಆಲೋಚಿಸುವ ಇಷ್ಟವೂ ಇರುವುದಿಲ್ಲ. ಆದರಿಂದ ತಮ್ಮ ಸುಖಾನುಭವದಲ್ಲಿ ಏನಾದರೂ ಕೇಡುಂಟಾದೀತೆಂದು ಅವರು ಭಯಪಡುತ್ತಾರೆ. ಈ ರೀತಿಯಿದ್ದರೆ ಸಮಾಜದಲ್ಲಿ ಶಾಂತಿ ಹೇಗೆ ಉಂಟಾದೀತು? ಪ್ರಪಂಚದಲ್ಲಿ ಅನೇಕ ಅನಿಷ್ಟ ಪ್ರವೃತ್ತಿಗಳೂ ಜಗಳಗಳೂ ಹಸಿವೆಯಾಧಿಕ್ಯದಿಂದುಂಟಾಗಿವೆ.

ಈ ಪ್ರಧಾನ ವಿಷಯದ ಉತ್ತಮ ಪರಿಹಾರ ಇಸ್ಲಾಮ್ ಸೂಚಿಸಿದೆ. ಮನುಷ್ಯನೆಂಬ ಕಾರಣದಿಂದ ಪ್ರತಿಯೋರ್ವ ಮಾನವನ ಹೃದಯದಲ್ಲಿ ಸೃಷ್ಟಿಕರ್ತನು ನೆಲೆನಿಲ್ಲಿಸಿರುವ ಸಹಾನುಭೂತಿ ಮತ್ತು ಉಪಕಾರವೆಂಬ ಯಾವ ಸದ್ಗುಣಗಳನ್ನು ಇಂದಿನ ಕ್ರೂರ ಸಮಾಜವು ಸಮಾಧಿಗೊಳಿಸಿದೆಯೋ ಆ ಸದ್ಗುಣಗಳನ್ನು ಇಸ್ಲಾಮ್ ಪ್ರಚೋದಿಸಿದೆ. ಸಮಾಜದಲ್ಲಿ ಅನುಸರಣೀಯರಾದವರ ಉದಾಹರಣೆಯನ್ನು ಕೊಡುತ್ತಾ ಅಂತಹ ಜನರು "ದೇವರ ಪ್ರೀತಿಗಾಗಿ, ಗತಿಹೀನರಿಗೂ, ಅನಾಥರಿಗೂ, ಬಂಧಿತರಿಗೂ, ಉಣ್ಣಿಸುತ್ತಾರೆ'' ಎಂದು ದೇವರು ಖುರ್‌ಆನಿನಲ್ಲಿ ಹೇಳಿರುವನು. ಆಹಾರವನ್ನು ಕೊಡುವಾಗ ಅವರು "ನಾವು ಕೇವಲ ದೇವರಿಗಾಗಿ, ದೇವರ ಪ್ರೀತಿಯನ್ನು ಸಂಪಾದಿಸಲಿಕ್ಕಾಗಿ'' ಉಣ್ಣಿಸುತ್ತಿದ್ದೇವೆಂದೂ, ಆ ಉಂಡ ಜನರೊಡನೆ ''ನಾವು ನಿಮ್ಮಿಂದ ಯಾವುದೇ ಪ್ರತಿಫಲವನ್ನಾಗಲೀ ಕೃತಜ್ಞತೆಯನ್ನಾಗಲೀ ಆಶಿಸುವುದಿಲ್ಲವೆಂದೂ'' ಅವರು ಹೇಳುತ್ತಾರೆ ಎಂಬ ಖುರ್-ಆನಿನ ಈ ವಚನವು ಪ್ರಪಂಚದಿಂದ ಹಸಿವನ್ನು ನೀಗಿಸಲು ಒಂದು ಉತ್ತಮ ಮಾರ್ಗವನ್ನು ಸೂಚಿಸಿದೆ.

2. ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲಿ ಪ್ರತಿಯೊಬ್ಬನಿಗೂ ಹಕ್ಕಿದೆಯೆಂದು ಇಸ್ಲಾಮ್ ಕಲಿಸಿದೆ. ಶ್ರೀಮಂತರ ಐಶ್ವರ್ಯದಲ್ಲಿ ಬೇಡುವವರಿಗೂ, ಬೇಡಲು ಅಸಮರ್ಥರಾದವರಿಗೂ ಹಕ್ಕಿದೆಯೆಂದು ಇಸ್ಲಾಮ್ ಕಲಿಸುತ್ತದೆ. ಆದುದರಿಂದ ಐಶ್ವರ್ಯವಂತರು ನಿರ್ಗತಿಕರ ಹಕ್ಕುಗಳನ್ನು ಕೊಡುವುದು ಅತ್ಯಾವಶ್ಯವಾಗಿದೆ.

3. ಎಲ್ಲಾ ವಿಧದ ಸುಖಲೋಲುಪತೆಯನ್ನು ಇಸ್ಲಾಮ್ ನಿಷೇಧಿಸಿದೆ. ಝಕಾತ್ ಎಂಬ ಸಂಪತ್ತಿನ ಮೇಲಿನ ತೆರಿಗೆಯನ್ನು ಇಸ್ಲಾಮ್ ವಿಧಿಸಿ ಅದರಿಂದ ಬಡವರೂ ನಿರ್ಗತಿಕರೂ ಸಹಾಯ ಪಡೆಯುವಂತೆ ಮಾಡಿತು. ಇದೇ ರೀತಿ ಮೃತನ ಆಸ್ತಿಯ ಪಾಲು ಮಾಡುವಿಕೆ, ವೀಲುನಾಮೆ, ದಾನ ಮತ್ತು ಇತರ ಹಣ ಕಾಸಿನ ವಿತರಣೆಯಿಂದ ಶ್ರೀಮಂತರ ಐಶ್ವರ್ಯದಲ್ಲಿ ಬಡವರೂ ಪಾಲ್ಗೊಂಡು ಮರ್ಯಾದೆಯ ಜೀವನ ನಡೆಸಲು ಸಾಧ್ಯವಾಗುವಂತೆ ಮಾಡಿತು.

4. ಇದೇ ರೀತಿ ಇಸ್ಲಾಮ್ ಪರೋಪಕಾರಕ್ಕಾಗಿ ಖರ್ಚು ಮಾಡದೆ ಚಿನ್ನ ಬೆಳ್ಳಿಯ ಸಂಗ್ರಹ ಮಾಡುವುದನ್ನು ವಿರೋಧಿಸಿದೆ. ಅಂತವರಿಗೆ ಕಠಿಣ ಶಿಕ್ಷೆ ದೊರೆಯುವುದೆಂದು ಮುನ್ನೆಚ್ಚರಿಕೆ ಕೊಟ್ಟಿದೆ.

5. ಇಸ್ಲಾಮ್ ಬಡ್ಡಿಯನ್ನು ನಿಷಿದ್ಧಗೊಳಿಸಿದೆ. ಇಸ್ಲಾಮ್ ಅನ್ಯಾಯಕರ ಲಾಭಭಡಕತನವನ್ನು ವಿರೋಧಿಸಿದೆ.

6. ಇಸ್ಲಾಮ್ ಪರರ ಸಂಪತ್ತನ್ನು ನೋಡಿ ಅಸೂಯೆಗೊಳ್ಳುವುದನ್ನು ವಿರೋಧಿಸಿದೆ. ಆ ಸಂಪತ್ತು ಪರೀಕ್ಷಾ ರೂಪದಲ್ಲಿ ಕೆಲವರಿಗೆ ನೀಡಲ್ಪಟ್ಟಿದೆಯೆಂದೂ

ದೇವರಿತ್ತುದರಲ್ಲಿ ಸಂತೃಪ್ತಿ ಪಡೆಯುವುದೇ ಉತ್ತಮ ವೆಂದು ಅದು ಕಲಿಸಿದೆ.

### ರಾಜ್ಯಾಡಳಿತೆಗಾರರು ಮತ್ತು ಇತರ ನಾಗರಿಕರು

ಭೂಲೋಕದಲ್ಲಿರುವ ಅಶಾಂತಿಗೆ ಒಂದು ಕಾರಣ ರಾಜ್ಯಾಡಳಿತ ನಡೆಸುವವರ ಮತ್ತು ಪ್ರಜೆಗಳ ಮಧ್ಯೆ ಉತ್ತಮ ಸಂಬಂಧದ ಕೊರತೆಯಾಗಿದೆ. ರಾಜ್ಯಾಡಳಿತ ನಡೆಸುವವರೂ ಸಾಮಾನ್ಯರೂ ತಂತಮ್ಮ ಅಂತಸ್ತನ್ನೂ ಜವಾಬ್ದಾರಿಗಳನ್ನೂ ಕರ್ತವ್ಯಗಳನ್ನೂ ಅರಿತರೆ ಒಂದು ಶಾಂತ ಸಮಾಜವು ಸ್ಥಾಪಿತವಾಗಿ ಲೋಕ ಶಾಂತಿಗೆ ಸಹ ಕಾರಿಯಾಗುವುದು.

ಸರಕಾರ ಮತ್ತು ಜನಸಾಮಾನ್ಯರ ಕರ್ತವ್ಯಗಳ ಕುರಿತು ಖುರ್-ಆನ್ ಈರೀತಿ ಹೇಳಿದೆ: "ರಾಜ್ಯಾಧಿಕಾರ ವನ್ನು ಅದರ ಯೋಗ್ಯತೆಯಿರುವವರಿಗೆ ಕೊಡಿರಿ. ರಾಜ್ಯಾಡಳಿತೆ ಪಡೆದವರು ನ್ಯಾಯದಿಂದ ವರ್ತಿಸಲಿ'' (ಸೂರ ನಿಸಾ).

ಸರಕಾರವನ್ನು ರಚಿಸುವುದಕ್ಕೆ ಜನರಿಗೆ ಅಧಿಕಾರ ವಿದೆಯೆಂದೂ ಯಾವರೀತಿ ಬೆಲೆಬಾಳುವ ವಸ್ತುವನ್ನು ಸುರಕ್ಷಿತವಾಗಿಡಲು ಸಮರ್ಥರ ಕೈಯ್ಯಲ್ಲಿ ಕೊಡುತ್ತೇವೋ ಅದೇರೀತಿ ರಾಜ್ಯಾಡಳಿತವನ್ನು ಅದನ್ನು ನಡೆಸಲು ಯೋಗ್ಯರಾಗಿರುವವರ ಕೈಗೆ ಕೊಡಬೇಕಲ್ಲದೆ ಅಯೋಗ್ಯ ರಿಗೆ ಇಂತಹ ಮಹತ್ವಾದ ಜವಾಬ್ದಾರಿಯನ್ನು ವಹಿಸಿ ಕೊಡಬಾರದೆಂದು ದೇವರು ಈ ವಚನದಲ್ಲಿ ಹೇಳಿರು ವನು.

ಇದೇರೀತಿ ದೇವರು ಸರಕಾರಿ ಅಧಿಕಾರಿಗಳ ಜವಾ ಬ್ದಾರಿಗಳನ್ನೂ, ಕರ್ತವ್ಯಗಳನ್ನೂ ವಿವರಿಸುತ್ತಾ ಅಂತಹ ವರು ತಮ್ಮ ಆಡಳಿತಕ್ಕೊಳಗಾಗಿರುವವರ ಅನಿವಾರ್ಯ ಆವಶ್ಯಕತೆಗಳನ್ನು ಪೂರೈಸಿ ಕೊಡಬೇಕಾಗುವುದು ಅವರ ಕರ್ತವ್ಯವೆಂದು ಹೇಳಿರುವನು. ಜನರ ಮೂಲಭೂತ ಹಕ್ಕುಗಳನ್ನು ಪೂರ್ಣವಾಗಿ ಕಾಪಾಡುವುದು ಅತ್ಯಾವಶ್ಯ ಕವೆಂದು ಹೇಳಿ ಆ ಹಕ್ಕುಗಳನ್ನು ಈರೀತಿ ಸ್ಪಷ್ಟಪಡಿಸಿ ರುವನು: —

"ನೀನು ಹಸಿದಿರಲಾರೆ, ನಗ್ನನಾಗಿರಲಾರೆ, ನೀನು ಬಾಯಾರಿಕೆಯಿಂದಿರಲಾರೆ, ಬಿಸಿಲಿನಲ್ಲಿ ಬೇಗುದಿಕೊಳ್ಳ ಲಾರೆ'' (ಸೂರ ಥಾ, ಹಾ) ಎಂಬ ವಚನದಲ್ಲಿ ದೇವರು ಸರಕಾರದ ಜವಾಬ್ದಾರಿಗಳನ್ನು ವಿವರಿಸುತ್ತಾ ಮಾನವನ ನಾಲ್ಕು ಮೂಲಭೂತ ಆವಶ್ಯಕತೆಗಳಾದ ಆಹಾರ, ನೀರು, ಬಟ್ಟೆ ಮತ್ತು ಮನೆಗಳನ್ನು ಒದಗಿಸಿಕೊಡುವುದು ಸರಕಾರದ ಕರ್ತವ್ಯವೆಂದು ಹೇಳಿರುವನು.

ಖುರ್-ಆನಿನ ಈ ಉಪದೇಶವನ್ನನುಸರಿಸಿ ಲೋಕಾನುಗ್ರಹಿಯಾದ ಪವಿತ್ರ ನಬಿಯವರು ಮನುಷ್ಯರ ಈ ನಾಲ್ಕು ಮೂಲಭೂತ ಹಕ್ಕುಗಳನ್ನು ವಿವರಿಸುತ್ತಾ ಈ ರೀತಿ ನುಡಿದಿರುವರು:—

"ಮನುಷ್ಯನಿಗೆ ನಾಲ್ಕು ಮೂಲಭೂತ ಹಕ್ಕುಗಳಿವೆ. ಆತನಿಗೆ ವಾಸಕ್ಕೆ ಮನೆ, ನಗ್ನತೆಯನ್ನು ಮರೆಸಲಿಕ್ಕೆ ಬಟ್ಟೆ ಮತ್ತು ಹಸಿವನ್ನಡಗಿಸಲಿಕ್ಕೆ ಆಹಾರ ಮತ್ತು ನೀರು ದೊರಕುವುದು ಅತ್ಯಾವಶ್ಯಕ.''

ಪ್ರಪಂಚದಲ್ಲಿ ಸ್ಥಿರವಾದ ಶಾಂತಿ ನೆಲಸಬೇಕಾದರೆ ಪ್ರತಿಯೊಂದು ಪ್ರದೇಶದ ಜನರಿಗೆ ಮೇಲಿನ ನಾಲ್ಕು ವಸ್ತುಗಳನ್ನು ಪೂರೈಸಿಕೊಡುವುದು ಅತ್ಯಾವಶ್ಯಕವಾ ಗಿದೆ. ಇಂದಲ್ಲದಿದ್ದರೆ ನಾಳೆಯಾದರೂ ಈ ಹಕ್ಕುಗಳನ್ನು ಒದಗಿಸಿಕೊಡುವುದಕ್ಕೆ ಪ್ರಪಂಚವು ನಿರ್ಬಂಧಿತವಾಗು ವುದು.

### ಆಹಾರ ಸಮಸ್ಯೆ

ಶಾಂತಿಯುತವಾದ ಸ್ವಸ್ಥ ಸಮಾಜದ ಸ್ಥಾಪನೆಗೆ ಆಹಾರ ಸಮಸ್ಯೆಯ ಪರಿಹಾರ ಅನಿವಾರ್ಯವಾಗಿದೆ. ಹಸಿದವರ ಕುರಿತು ಸಮಾಜವೂ ಸರಕಾರವೂ ಗಮನ ಹರಿಯಿಸದಿದ್ದರೆ ಅವರು ಹಸಿವೆಯಾಧಿಕ್ಯದಿಂದ ಕಂಗೆಟ್ಟು ಸರಕಾರವನ್ನೇ ಬದಲಾಗುವಂತೆ ಮಾಡಿದ ಉದಾಹರಣೆ ಗಳು ಚರಿತ್ರೆಯಲ್ಲಿ ಹಲವಾರು ಇವೆ.

ಈ ಸಮಸ್ಯೆಯನ್ನು ಸರಿಯಾದ ಅಸ್ತಿವಾರದ ಮೇಲೆ ಪರಿಹರಿಸಲು ಸಮಾಜದಿಂದ ಕಾಳಸಂತೆ, ವಂಚನೆ, ಲಂಚ, ಅಪ್ರಾಮಾಣಿಕತೆ, ಸುಳ್ಳು, ಮೋಸ ಮತ್ತು ಕಪ್ಪು ಹಣ ಇವುಗಳು ನಿವಾರಣೆಯಾಗುವುದು ಅಗತ್ಯವಾಗಿದೆ. ಮಾನವೀಯತೆಯೂ ನಾಚಿಕೆಪಡುವಂತೆ ಮಾಡುವ ಈ ನ್ಯೂನ್ಯತೆಗಳನ್ನು ಬಲವಾದ ಹಸ್ತಗಳಿಂದ ನಿವಾರಿಸು ವುದು ಅತ್ಯಾವಶ್ಯಕವಾಗಿದೆ. ಆಯಾಯ ಕಾಲದ ಸರಕಾರ ಗಳು ಈ ಪರಿಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ಸಾಧ್ಯವಿ ದ್ದಷ್ಟು ಪ್ರಯತ್ನ ಮಾಡುತ್ತವೆ. ಆದರೆ ಸರಕಾರದ ಹಸ್ತಗಳನ್ನು ಬಲಪಡಿಸಲು ಸಾಮಾಜಿಕ ಸಂಘ ಸಂಸ್ಥೆ ಗಳೂ ಕಾರ್ಯೋನ್ಮುಖರಾಗಿ ಮಾನವೀಯತೆಯ ಉನ್ನತ

ಮೌಲ್ಯಗಳನ್ನು ಕಾಪಾಡಲು ಜನರಲ್ಲಿ ಹೃದಯ ಪರಿವರ್ತನೆಯುಂಟಾಗುವಂತೆ ಪ್ರಯತ್ನಿಸಿ ಸರಕಾರದ ಕಾರ್ಯಕ್ರಮಗಳು ಬಲಗೊಳ್ಳುವಂತೆ ಶ್ರಮಿಸುವುದು ಬಹಳ ಅಗತ್ಯವಾಗಿದೆ.

ಪವಿತ್ರ ಪ್ರವಾದಿಯವರ ಕಾಲದಲ್ಲಿ ಈ ರೀತಿಯ ಸ್ಥಿತಿಗತಿ ತಲೆದೋರಿದಾಗ ಅವರು ಬಡವರ ಮತ್ತು ಶ್ರೀಮಂತರ ಸಂಗ್ರಹಗಳನ್ನು ಒಟ್ಟುಗೂಡಿಸಿ ಪ್ರತಿಯೊಬ್ಬರ ಆವಶ್ಯಕತೆಗನುಸಾರವಾಗಿ ಕೊಡುವ ರೇಶನ್ ಸಂಪ್ರದಾಯವನ್ನು ಜಾರಿಗೆ ತಂದಿದ್ದರು.

ಇದೇರೀತಿ ಆಹಾರ ಧಾನ್ಯಗಳ ಶೇಖರಣೆಯನ್ನು ಪವಿತ್ರ ಪ್ರವಾದಿಯವರು ಅಧಾರ್ಮಿಕವೆಂದು ಘೋಷಿಸಿ "ಆಹಾರ ಧಾನ್ಯಗಳನ್ನು ಶೇಖರಿಸಿಡುವವನು ಮಹಾಪಾಪಿ''ಯೆಂದು ಹೇಳಿರುವರು.

ಆಹಾರದ ಅನಧಿಕೃತ ಶೇಖರಣೆ ಮತ್ತು ಅದರ ಮೂಲಕ ಲಭಿಸುವ ಕಪ್ಪುಹಣ ಇವುಗಳನ್ನು ನಮ್ಮ ದೇಶದಿಂದ ನಿವಾರಿಸದ ಹೊರತು ನಮ್ಮ ದೇಶವು ಕಂಗಾಲಾಗಿರುವ ಆಹಾರ ಸಮಸ್ಯೆಯಿಂದ ಪಾರಾಗುವುದು ಕಷ್ಟ.

ಆಹಾರ ಸಮಸ್ಯೆಯ ಪರಿಹಾರದ ಕರ್ತವ್ಯವನ್ನು ಇಸ್ಲಾಮು ಸಮಾಜ ಮತ್ತು ಸರಕಾರದ ಮೇಲಿರಿಸಿದೆ. ಆದರೆ ಅದೇ ಸಮಯದಲ್ಲಿ ಇಸ್ಲಾಮು ಆಹಾರ ಸಮಸ್ಯೆಯ ಪರಿಹಾರವನ್ನು ವೈಯಕ್ತಿಕವಾಗಿ ಭಕ್ತಿಯೊಂದಿಗೆ ಜೋಡಿಸಿದೆ.

''ದೇವರ ಭಕ್ತಿಯನ್ನು ಕೈಗೊಂಡವನಿಗೆ ದೇವರು ಆಹಾರಕ್ಕಾಗಿ ಯಾವುದಾದರೊಂದು ಮಾರ್ಗವನ್ನು ತೆರೆಯುವನು. ಆತನಿಗೆ ಯಾವುದೇ ರೀತಿಯಲ್ಲಿ ಊಹಿಸಲು ಸಾಧ್ಯವಿಲ್ಲದ ವಿಧದಲ್ಲಿ ಅದನ್ನು ಒದಗಿಸುವನು'' ಎಂದು ಖುರ್-ಆನಿನಲ್ಲಿ ದೇವರು ಹೇಳಿರುವನು.

ಪ್ರಪಂಚದಲ್ಲಿ ವ್ಯಾಪಿಸಿರುವ ಅಶಾಂತಿಯ ಮೂಲ ಕಾರಣವನ್ನು ಕಂಡುಹಿಡಿಯಲು ಪ್ರಯತ್ನಿಸಿದರೆ ಅದರ ಹಿಂದೆ ಇರುವ ಪ್ರಧಾನ ಪ್ರೇರಕವು ಸ್ವಾರ್ಥವೆಂದು ತಿಳಿಯುತ್ತದೆ. ಜೀವನದ ವಿವಿಧ ಶಾಖೆಗಳಲ್ಲಿ ಕಾರ್ಯಮಗ್ನರಾಗಿರುವ ಲಕ್ಷಾಂತರವಲ್ಲ, ಕೋಟ್ಯಾಂತರ ಜನರು ತಮ್ಮ ಕರ್ತವ್ಯಗಳಿಂದ ಪರಾಙ್ಮುಖರಾಗಿ ಕೇವಲ ತಮ್ಮ ಹಕ್ಕುಗಳಿಗಾಗಿ ರಾತ್ರಿ ಹಗಲು ಹೋರಾಡುತ್ತಾ ಇರುತ್ತಾರೆ. ಯಾವ ಕರ್ತವ್ಯಗಳ ನಿರ್ವಹಣೆಯಿಂದ ಹಕ್ಕುಗಳು ಸ್ಥಿರಗೊಳ್ಳುವುವೋ ಆ ಕರ್ತವ್ಯಗಳ ಕುರಿತು ಅವರು ಪೂರ್ಣ ಶ್ರದ್ಧೆ ವಹಿಸುವುದಿಲ್ಲ. ಆದರೆ ತಮ್ಮ ಹಕ್ಕುಗಳಿಗಾಗಿ ಅತ್ಯಂತ ಒತ್ತಾಯಿಸುತ್ತಾರೆ. ಎಷ್ಟರವರೆಗೆ ಅವರಿಗೆ ತಮ್ಮ ಉದ್ದೇಶಿತ ಹಕ್ಕುಗಳು ದೊರೆಯುವುದಿಲ್ಲವೋ ಅಷ್ಟರವರೆಗೆ ಅಶಾಂತಿಯು ವರ್ಧಿಸುತ್ತಲೇ ಇರುತ್ತದೆ.

ಪವಿತ್ರ ಖುರ್-ಆನ್ ಈಗಿನ ಕಾಲದ ದಾರಿದಪ್ಪಿದ ಮಾನವರನ್ನು ಈರೀತಿ ಎಚ್ಚರಿಸಿದೆ.

"ನಿಮ್ಮನ್ನು ಮುನ್ನೋಟವು ದಿಗ್ಭ್ರಮೆಗೊಳಿಸಿದೆ. ನೀವು ಗೋರಿಯನ್ನು ತಲುಪುವವರೆಗೆ ಇದೇ ಮುಂದುವರಿಯುವುದು'' ಈ ವಚನದಿಂದ ದೇವರು ಈರೀತಿ ಉದ್ದೇಶಿಸಿರುವನು: ಅಶಾಂತರಾಗಿರುವ ಜನರೇ, ನೀವು ಒಬ್ಬರಿಗಿಂತ ಇನ್ನೊಬ್ಬರು ತಮ್ಮ ತಮ್ಮ ಹಕ್ಕುಗಳಿಗಾಗಿ ಆವಶ್ಯಪಡುವುದರಲ್ಲಿ, ತಮ್ಮ ಕರ್ತವ್ಯಗಳನ್ನು ಮರೆತು ಮುನ್ನುಗ್ಗುತ್ತಿದ್ದೀರಿ. ನೀವು ನಿಮ್ಮ ಹಕ್ಕುಗಳ ಜೊತೆ ಕರ್ತವ್ಯಗಳನ್ನು ಜ್ಞಾಪಿಸದಿದ್ದರೆ ಈ ಅಶಾಂತಿ ಎಂದಿಗೂ ಕೊನೆಗೊಳ್ಳಲಾರದು. ಒಂದು ವಿಭಾಗದವರು ತಮ್ಮ ಕರ್ತವ್ಯಗಳನ್ನು ಮರೆತರೆ ಇನ್ನೊಂದು ವಿಭಾಗದವರ ಹಕ್ಕುಗಳು ಅಪಹರಿಸಲ್ಪಡುವುದು. ಈರೀತಿ ಹಕ್ಕುಗಳ ಅಪಹಾರದಿಂದ ಅವರು ಕ್ಷೋಭಿತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾರೆ. ಇದೇ ಮುಂದುವರಿದು ಕೊನೆಗೆ ಎಲ್ಲರೂ ಗೋರಿಗೆ ತಲುಪುತ್ತಾರೆ.

ಒಬ್ಬರಿಗಿಂತ ಇನ್ನೊಬ್ಬರು ಹಕ್ಕುಗಳಿಗಾಗಿ ಹೋರಾಡದೆ ತ್ಯಾಗದಲ್ಲಿ. ಒಬ್ಬರಿಗಿಂತ ಇನ್ನೊಬ್ಬರು ಮುನ್ನುಗ್ಗಲು ಯತ್ನಿಸಿದರೆ ಈ ರೀತಿಯ ಅಶಾಂತಿ ಎಂದಿಗೂ ಉಂಟಾಗದು.

"ಉತ್ತಮವಾದ ಕೆಲಸದಲ್ಲಿ ಒಬ್ಬರಿಗಿಂತ ಇನ್ನೊಬ್ಬರು ಮುಂದಾಗಲು ಯತ್ನಿಸಿರಿ" ಎಂದು ಪವಿತ್ರ ಖುರ್-ಆನ್ ಉಪದೇಶಿಸಿದೆ. ಪ್ರತಿಯೊಬ್ಬರು ಇತರರ ಸೇವೆ ಮಾಡಿ ಆತ್ಮಿಕ ಶಾಂತಿಗಳಿಸಲು ಯತ್ನಿಸಬೇಕಾಗಿದೆ. ಈಗಿನ ಕಾಲದಲ್ಲಿ ಸೇವಾ ಮನೋಭಾವ ಮತ್ತು ಪರೋಪಕಾರ ಭಾವನೆ ನಿಶ್ಶೇಷವಾಗಿರುವುದರಿಂದ ದ್ವೇಷವೂ ವಿರೋಧವೂ ವ್ಯಾಪಿಸಿದೆ. ಇದೇ ಕಾರಣದಿಂದ ಅಶಾಂತಿಯು ಎಂದಿಗೂ ಕೊನೆಗೊಳ್ಳುವಂತೆ ಕಂಡುಬರುವುದಿಲ್ಲ.

—o—o—o—

# ದೇವರನ್ನು ಕಾಣಬಹುದೇ?

—ಮಿರ್ಝಾ ಬಶೀರ್ ಅಹ್ಮದ್ M. A.

ಜಗತ್ಪಾಲಕನಾದ ಪರಮಾತ್ಮನ ಕುರಿತು ಜನರ ಹೃದಯಗಳಲ್ಲಿ ಸಾಮಾನ್ಯವಾಗಿ ಉದಯವಾಗುವ ಒಂದು ಸಂಶಯವು, ದೇವರೆಂಬ ಒಬ್ಬನು ಇರುವನಾದರೆ ಅವನೇಕೆ ಕಾಣಲ್ಪಡುವುದಿಲ್ಲ ಎಂಬುದು. ಈ ಸಂಶಯವು ಹೊಸದೇನೂ ಅಲ್ಲ. ಮೊದಲಿನಿಂದಲೇ ಈ ಪ್ರಶ್ನೆಯು ಕೇಳಲ್ಪಡುತ್ತಿತ್ತು. ಅರೇಬ್ಯಾದ ನಾಸ್ತಿಕರು ಪವಿತ್ರ ಪ್ರವಾದಿ ಮುಹಮ್ಮದ್ ಪೈಗಂಬರರೊಡನೆ, "ದೇವರು ಇರುವನೆಂದಾದರೆ ನಮಗೆ ತೋರಿಸಿ ಕೊಡು, ನಾವು ನಂಬುತ್ತೇವೆ'' ಎಂದು ಹೇಳಿದುದಾಗಿ ಪವಿತ್ರ ಖುರ್-ಆನಿನಿಂದ ತಿಳಿದುಬರುತ್ತದೆ. (ಸೂರ: ಬನೀ ಇಸ್ರಾಯೀಲ್). ಆದರೆ ಈ ಸಂಶಯದ ಕುರಿತು ಕೇಳುವಾಗಲೂ ಓದುವಾಗಲೂ ನನಗೆ ಈ ಸಂಶಯವನ್ನು ಸೃಷ್ಟಿಸಿದವರ ಕುರಿತು ಅನುಕಂಪ ತೋರುತ್ತದೆ. ಹಾ! ಮನುಷ್ಯನು ಮಾರ್ಗಭ್ರಷ್ಟನಾಗಲು ತೊಡಗುವಾಗ ಪ್ರತ್ಯಕ್ಷವಾದ ಪ್ರಮಾಣಗಳನ್ನೂ ನಿಷೇಧಿಸಲು ಮುಂದಾಗುವಂತೆ ಅವನ ಬುದ್ಧಿಗೆ ಮಂಕುಹಿಡಿದು ಹೋಗುತ್ತದೆ! ಹಳೆಯ ಕಾಲದಲ್ಲಾದರೆ, ಈ ವಾದವು ಎಷ್ಟೇ ನಿರರ್ಥಕವೂ ಅಸಂಬದ್ಧವೂ ಆಗಿದ್ದರೂ ಕೆಲವು ಅವಿವೇಕಿಗಳನ್ನು ತಾತ್ಕಾಲಿಕವಾಗಿಯಾದರೂ ವಂಚನೆಯಲ್ಲಿರಿಸಲು ಪರ್ಯಾಪ್ತವಾಗಿತ್ತು. ಆದರೆ, ಇಂದು ಈ ವಾದವು ನಿಜವಾಗಿಯೂ ಅದ್ಭುತಕರವಾಗಿದೆ. ನನ್ನ ಅಭಿಪ್ರಾಯದಲ್ಲಿ ಇಂತಹ ವಾದವನ್ನು ಮುಂದಿಡುವುದು ಎಳೆಯ ಪ್ರಾಯದ ಮಕ್ಕಳಿಗೆ ಮಾತ್ರ ಅನುಯೋಜ್ಯ. ಹೇಗಿದ್ದರೂ, ಇದು ಒಂದು ಸಾಮಾನ್ಯವಾದ ಸಂಶಯವಾಗಿರುವುದರಿಂದ ಇದನ್ನು ನೀಗಿಸಬೇಕಾದುದು ಅಗತ್ಯವಾಗಿದೆ. ಸಂಕ್ಷಿಪ್ತ ರೂಪದಲ್ಲಿ ನಾನು ಅದನ್ನು ಉತ್ತರಿಸುವೆನು.

ಲೋಕದಲ್ಲಿ ವ್ಯತ್ಯಸ್ತವಾದ ವಸ್ತುಗಳ ಕುರಿತು ಅರಿತುಕೊಳ್ಳಲು ನಿಶ್ಚಯಿಸಲ್ಪಟ್ಟ ಮಾರ್ಗಗಳೂ ವ್ಯತ್ಯಸ್ತವಾದುದೆಂದು ತಿಳಿದಿರಬೇಕು. ಕೆಲವು ವಸ್ತುಗಳ ಕುರಿತು ಕಾಣುವುದರಿಂದ ನಮಗೆ ಅದನ್ನು ತಿಳಿಯಲು ಸಾಧ್ಯವಾದರೆ, ಇನ್ನು ಕೆಲವನ್ನು ರುಚಿಸುವುದರಿಂದಲೂ, ಕೆಲವನ್ನು ಆಘ್ರಾಣಿಸುವುದರಿಂದಲೂ, ಕೆಲವನ್ನು ಸ್ಪರ್ಶಿಸುವುದರಿಂದಲೂ ನಮಗೆ ಅದರ ಕುರಿತು ತಿಳುವಳಿಕೆಯುಂಟಾಗುತ್ತದೆ.

ಈ ಎಲ್ಲಾ ತಿಳಿವಳಿಕೆಯೂ ಒಂದೇರೀತಿಯಲ್ಲಿ ದೃಢವೂ ವಿಶ್ವಾಸ ಯೋಗ್ಯವೂ ಆಗಿರುತ್ತದೆ. ಯಾವುದಾದರೂ ಒಂದು ವಸ್ತುವನ್ನು ಇಂತಹ ಮಾರ್ಗದಲ್ಲಿ ಅರಿವು ಲಭಿಸಿದರೆ ಮಾತ್ರವೇ ನಾನು ನಂಬುವೆನು ಎಂದು ವಾದಿಸಲು ನಮಗೆ ಹಕ್ಕಿರುವುದಿಲ್ಲ. ಉದಾಹರಣೆಗೆ ಬಣ್ಣದ ಕುರಿತು ತಿಳಿಯುವ ಮಾರ್ಗವು ಕಣ್ಣುಗಳಾಗಿವೆ. ಅಂದರೆ ಇಂತಿಂತಹ ಬಣ್ಣಗಳು ಇಂತಿಂತಹ ನಮೂನೆಯಲ್ಲಿವೆ ಎಂದು ನಾವು ದೃಷ್ಟಿಸುವುದರ ಮೂಲಕ ತಿಳಿದುಕೊಳ್ಳುತ್ತೇವೆ. ಇದೇರೀತಿ ವಾಸನೆಯನ್ನು ತಿಳಿದುಕೊಳ್ಳುವ ಮಾರ್ಗವು ಮೂಗೂ, ಶಬ್ದವನ್ನು ಗ್ರಹಿಸಿಕೊಳ್ಳುವ ಮಾರ್ಗವು ಕಿವಿಯೂ ಆಗಿದೆ. ಕಣ್ಣುಗಳ ಮೂಲಕ ವಾಸನೆಯನ್ನೂ ಮೂಗಿನ ಮುಖಾಂತರ ಬಣ್ಣಗಳನ್ನೂ ಸ್ಪರ್ಶನ ಮಾರ್ಗದಿಂದ ಶಬ್ದವನ್ನೂ ಗ್ರಹಿಸಿಯಲ್ಲದೆ ನಂಬಲಾರೆನೆಂದು ಯಾರಾದರೂ ಹೇಳಿದರೆ ಅದನ್ನು ಶುದ್ಧ ಹುಚ್ಚೆಂದು ಕರೆಯುವರು. ಆದರೂ, ದೇವರ ಕುರಿತು ಈ ಕಾಲದಲ್ಲೂ ಇಂತಹ ಪ್ರಶ್ನೆಗಳು ಕೇಳಲ್ಪಡುವುದೂ ಅವರು ಬುದ್ಧಿವಂತರೆಂದು ಪರಿಗಣಿಸಲ್ಪಡುವುದೂ ಆಶ್ಚರ್ಯಕರವಾಗಿದೆ. ಈ ಹುಚ್ಚುತನಕ್ಕೆ ಕಾರಣವೇನೆಂದು ಮಂದಬುದ್ಧಿಗಳಾದ ಇವರೊಡನೆ ಯಾರೂ ಕೇಳುವುದೂ ಇಲ್ಲ. ಏನು, ದೇವರೆಂಬುದು ನಿಮ್ಮ ಅಪಹಾಸ್ಯಕರವಾದ ಭ್ರಾಂತಿಗೆ ವಿಧೇಯವಾಗಬಹುದಾದಂತಹ ಒಂದು ವಸ್ತುವೇ?

ಲೋಕದ ಹಲವು ವಸ್ತುಗಳ ಕುರಿತು ತಿಳಿವಳಿಕೆಯನ್ನೀಯುವ ಮಾರ್ಗವಾದ ಬಾಹೇಂದ್ರಿಗಳ ಕುರಿತು

ಮಾತ್ರವೇ ನಾನೀಗ ಹೇಳಿರುವುದು. ಬಾಹ್ಯೇಂದ್ರಿಯಗಳಲ್ಲದ ಮಾರ್ಗದಿಂದ ಅರಿತುಕೊಳ್ಳಬೇಕಾದ ಬೇರೆಯೂ ಅಸಂಖ್ಯಾತ ವಸ್ತುಗಳು ಈ ಪ್ರಪಂಚದಲ್ಲಿವೆ. ಬಾಹ್ಯೇಂದ್ರಿಯಗಳಿಂದ ಲಭಿಸುವ ಜ್ಞಾನದಂತೆ ಈ ಅರಿವಿನಲ್ಲೂ ನಾವು ನಂಬುಗೆಯಿಡುತ್ತೇವೆ. ಉದಾಹರಣೆಗಾಗಿ ಅಯಸ್ಕಾಂತ ಶಕ್ತಿಯನ್ನು ನೋಡಿರಿ. ನಿಮಗೆ ಅದನ್ನು ಕಣ್ಣಿನಿಂದ ಕಾಣಲಿಕ್ಕೋ, ಕಿವಿಯಿಂದ ಕೇಳಲಿಕ್ಕೋ, ಮೂಗಿನಿಂದ ಆಘ್ರಾಣಿಸಲಿಕ್ಕೋ, ನಾಲಗೆಯಿಂದ ರುಚಿಸಿ ನೋಡಲಿಕ್ಕೋ ಸಾಧ್ಯವಿದೆಯೋ? ಎಂದಿಗೂ ಸಾಧ್ಯವಿಲ್ಲ. ಹಾಗಿದ್ದರೂ ಆ ಶಕ್ತಿಯನ್ನು ನಿಷೇಧಿಸಲು ನಿಮ್ಮಲ್ಲಿ ಯಾರಿಗೂ ಸಾಧ್ಯವೇ? ಅದೂ ನಿಮ್ಮಿಂದ ಸಾಧ್ಯವಿಲ್ಲ. ನೋಡಿರಿ, ಆ ಕಾಂತ ಶಕ್ತಿಯನ್ನು ನೀವು ಯಾವುದಾದರೂ ಬಾಹ್ಯೇಂದ್ರಿಯಗಳಿಂದಲ್ಲ ಬದಲಾಗಿ, ಅದರ ಪ್ರವೃತ್ತಿಯಿಂದಲೂ ಪರಿಣಾಮದಿಂದಲೂ ತಿಳಿದುಕೊಂಡಿರುವಿರಿ. ಆದರೂ ಪರಿಣಾಮದಿಂದುಂಟಾದ ಅರಿವೂ ಬಾಹ್ಯೇಂದಿಯಗಳಿಂದ ಸಿದ್ಧಿಸಿದ ಅರಿವಿನಂತೆಯೇ ನಿಮ್ಮಲ್ಲಿ ದೃಢ ನಂಬಿಕೆಯನ್ನುಂಟುಮಾಡುತ್ತದೆ. ಕಾಂತ ಶಕ್ತಿಯನ್ನು ಒಳಗೊಂಡಿರುವ ಒಂದು ಕಬ್ಬಿಣದ ತುಂಡಿನೆಡೆ ಸಾಧಾರಣ ಒಂದು ಕಬ್ಬಿಣದ ತುಂಡನ್ನು ತಂದಲ್ಲಿ ಕಾಂತ ಶಕ್ತಿಯಿರುವ ಕಬ್ಬಿಣವು ಸಾಧಾರಣ ಕಬ್ಬಿಣವನ್ನು ತನ್ನೆಡೆಗೆ ಆಕರ್ಷಿಸುವುದನ್ನು ಕಾಣಬಹುದು. ಆಗ ಅದರ ಕುರಿತು ಬಾಹ್ಯೇಂದ್ರಿಯಗಳಿಂದ ಗ್ರಹಿಸಲಸಾಧ್ಯವಾದ ಯಾವುದೋ ಶಕ್ತಿಯು ಈ ಕಬ್ಬಿಣದ ತುಂಡಿನಲ್ಲಿದೆಯೆಂದು ನಿಮಗೆ ತಿಳಿವಳಿಕೆಯುಂಟಾಗುತ್ತದೆ. ಆ ಶಕ್ತಿಯ ಕುರಿತು ನಿಮಗೆ ಅರಿವುಂಟಾಗುವುದು ಅದರ ಕಾರ್ಯ ಮತ್ತು ಪರಿಣಾಮದ ಮೂಲಕವಾಗಿದೆ. ಕಾಂತ ಶಕ್ತಿಯು ಕಾಣಲೂ, ಕೇಳಲೂ, ಸ್ಪರ್ಶಿಸಲೂ, ಮೂಸಿ ತಿಳಿಯಲೂ, ರುಚಿಸಲೂ ಸಾಧ್ಯವಿಲ್ಲದ ಒಂದು ಶಕ್ತಿಯಾಗಿರುವುದರಿಂದ ಅದು ವಿಶ್ವಾಸಯೋಗ್ಯವಲ್ಲವೆಂಬ ಒಂದು ಸಂಶಯ ಕೂಡಾ ನಿಮಗೆ ಎಂದೂ ಉಂಟಾಗುವುದಿಲ್ಲ. ನಿಮ್ಮ ಹೃದಯಗಳ ಪೂರ್ಣವಾದ ನಂಬಿಕೆಯನ್ನು ಗಳಿಸಿರುವ ವಿದ್ಯುಚ್ಛಕ್ತಿ ಕೂಡಾ ಇದೇ ರೀತಿ ನೇರವಾಗಿ ಕಾಣಲು ಸಾಧ್ಯವಿಲ್ಲದ ಒಂದು ಶಕ್ತಿಯಾಗಿದೆ. ಕೋಣೆಯೊಳಗಿನ ಸ್ವಿಚ್ಚನ್ನು ಅದು ಮುತ್ತಲೇ ನಿಮ್ಮ ಫ್ಯಾನ್ ತಿರುಗಲು ತೊಡಗುವುದು. ಆಗ ಆ ಫ್ಯಾನಿನಲ್ಲಿ ಅದು ವರೆಗೂ ಇರದಿದ್ದ ಒಂದು ಬಾಹ್ಯ ಶಕ್ತಿಯು ಕಾರ್ಯವೆಸಗತೊಡಗಿದೆಯೆಂದು ನೀವು ತಿಳಿಯುತ್ತೀರಿ. ಆದರೆ ನೀವು ಆ ಶಕ್ತಿಯನ್ನು ನೇರವಾಗಿ ನೋಡಿಲ್ಲ, ಕೇಳಿಲ್ಲ, ಮೂಸಿಲ್ಲ, ಸ್ಪರ್ಶಿಸಲಿಲ್ಲ. ಬಾಹ್ಯವಾದ ಯಾವುದೇ ಇಂದ್ರಿಯದ ಮೂಲಕ ನೀವದನ್ನು ನೇರವಾಗಿ ಗ್ರಹಿಸಿಕೊಂಡಿಲ್ಲ. ಆದರೂ ಕೂಡಾ ವಿದ್ಯುತ್ ಎಂಬುದು ಒಂದು ಮಹಾ ಶಕ್ತಿಯಾಗಿರುವುದೆಂಬ ವಿಶ್ವಾಸದಿಂದ ನಿಮ್ಮ ಹೃದಯವು ತುಂಬಿರುವುದು. ವಿದ್ಯುತ್ತನ್ನು ನೀವು ಕಣ್ಣಿನಿಂದ ಕಂಡಿಲ್ಲವಾದರೂ ಅದರ ಕಾರ್ಯನಿರ್ವಹಣೆಯನ್ನು ನೀವು ತಿಳಿದುಕೊಂಡಿದ್ದೀರಿ ಆದುದರಿಂದ ಅದನ್ನು ನಿಷೇಧಿಸಲು ನೀವು ಧೈರ್ಯವಂತರಲ್ಲ. ಸೂರ್ಯ, ಚಂದ್ರ, ನದಿ, ಪರ್ವತ ಇತ್ಯಾದಿ ಭೌತಿಕ ವಸ್ತುಗಳ ಕುರಿತು ನಿಮಗೆ ವಿಶ್ವಾಸವಿರುವಂತೆ ಅದರ ಕುರಿತೂ ನೀವು ವಿಶ್ವಾಸವುಳ್ಳವರಾಗಿದ್ದೀರಿ.

ಮತ್ತೂ ಉದಾಹರಣೆಗಾಗಿ ಪ್ರೇಮ ವಿಕಾರವನ್ನು ನೋಡಿರಿ. ಪ್ರೇಮವನ್ನು ನೋಡಿದ, ಕೇಳಿದ ಸ್ಪರ್ಶಿಸಿದ, ಮೂಸಿದ ಯಾ ರುಚಿಸಿದ ವ್ಯಕ್ತಿಗಳು ನಿಮ್ಮಲ್ಲಿ ಯಾರಾದರೂ ಇರುವರೇ? ಇಲ್ಲ, ಖಂಡಿತವಾಗಿಯೂ ಇಲ್ಲ. ಹಾಗಾದರೆ ನಾನು ಕೇಳುತ್ತೇನೆ – ನಿಮ್ಮಲ್ಲಿ ಯಾರಿಗಾದರೂ ಪ್ರೇಮವೆಂಬ ಒಂದಿಲ್ಲವೆಂದು ನಿರಾಕರಿಸಲು ಸಾಧ್ಯವೇ? ಪ್ರತ್ಯೇಕ ರೀತಿಯಲ್ಲಿ ಪ್ರೇಮಕ್ಕೆ ಸಿಲುಕಿದವರೂ ಪ್ರೇಮದ ವೇದನೆಯನ್ನು ಅನುಭವಿಸಿದವರೂ ಯಾರಾದರೂ ಈ ಉಪನ್ಯಾಸದ ಓದುಗರಲ್ಲಿ ಇರುವರೋ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಯಾರಾದರೂ ಇರುವಲ್ಲಿ ನಾನವರೊಡನೆ ಕೇಳುತ್ತೇನೆ: ತೂಕದಲ್ಲಿ ಒಂದು ರಾತ್ಲು ಕೂಡಾ ಇಲ್ಲದ ನಿಮ್ಮ ಕಿರು ಹೃದಯದಲ್ಲಿ ಆಳವೂ ತೀರವೂ ಇಲ್ಲದಂತಹ ಪ್ರೇಮದ ಒಂದು ಸಮುದ್ರವೇ ಉಕ್ಕಿ ಹರಿಯುವ ದೃಶ್ಯವನ್ನು ನೀವು ಕಂಡಿಲ್ಲವೇ? ಉಕ್ಕಿ ಹರಿಯಲು ತೊಡಗಿದಾಗ ದೈವ ಸೃಷ್ಟಿಯಲ್ಲಿ ಅತ್ಯಂತ ಭಯಂಕರವೂ ಅತ್ಯಂತ ಶಕ್ತಿಯುತವೂ ಆದುದೆಂದು ಕರೆಯಲ್ಪಡಲು ಯೋಗ್ಯತೆಯಿರುವ ಒಂದಾಗಿ ಅದು ಮಾರ್ಪಡುವುದು. ತನ್ನ ಪ್ರೇಮ ಭಾಜನಕ್ಕಾಗಿ ಪರ್ವತದೊಡನೆ ಸೆಣಸಬೇಕಾದರೂ ಮರುಭೂಮಿಯನ್ನು ಪಾರುಮಾಡಬೇಕಾದರೂ ವನ್ಯ ಮೃಗಗಳನ್ನು ಎದುರಾಗಬೇಕಾದರೂ ಅಗ್ನಿ ಜ್ವಾಲೆಗೆ ನೆಗೆಯಬೇಕಾದರೂ ಸಮುದ್ರದ ಭಯಾನಕವಾದ ತೆರೆಮಾಲೆ

ಗಳೊಡನೆ ಹೋರಾಡಬೇಕಾಗಿ ಬಂದರೂ ಹಿಂಜರಿಯಲು ತಯಾರಿಲ್ಲದ ಒಂದು ಶಕ್ತಿಯನ್ನು ಕೇವಲ ಬಲಹೀನನಾದ ಒಬ್ಬ ಮನುಷ್ಯನಲ್ಲಿ ಅದು ಉಂಟುಮಾಡುತ್ತದೆ. ರಾತ್ರಿಯಿಡೀ ನಿದ್ರೆಯಿಲ್ಲದೆ, ಹಗಲಿಡೀ ಭ್ರಾಂತನಂತೆ ತಿರುಗಾಡಿ ತನ್ನ ಜೀವರಕ್ತವನ್ನು ಕಣ್ಣಿನ ಮೂಲಕ ಸುರಿಸಬೇಕಾಗಿ ಬಂದರೂ 'ಅಯ್ಯೋ' ಎಂದವನು ಹೇಳಲಾರನು. ಆದರೆ ಒಬ್ಬರಾದರೂ ಅದನ್ನು ಕಂಡದ್ದೋ, ಕೇಳಿದ್ದೋ, ಸ್ಪರ್ಶಿಸಿದ್ದೋ ಇಲ್ಲ. ಇದೇ ರೀತಿಯಲ್ಲಿ ಸಮಯ, ಕಾಲ, ಬುದ್ಧಿ, ಮೋಹ, ಕೋಪ, ದಯೆ ಮೊದಲಾದವುಗಳನ್ನೂ ನೀವು ಬಾಹ್ಯೇಂದ್ರಿಯಗಳಿಂದ ಗ್ರಹಿಸಿದ್ದಿಲ್ಲ. ಹಾಗಿದ್ದರೂ ಅವುಗಳ ಅಸ್ತಿತ್ವವನ್ನು ನೀವು ಒಪ್ಪುತ್ತೀರಿ.

ಒಟ್ಟಿನಲ್ಲಿ ಲೋಕದಲ್ಲಿರುವ ವಿವಿಧ ವಸ್ತುಗಳ ಅರಿವನ್ನು ಸಂಪಾದಿಸಿಕೊಳ್ಳಲು ವಿವಿಧ ಮಾರ್ಗಗಳು ನಿಶ್ಚಯಿಸಲ್ಪಟ್ಟಿವೆ. ಕೆಲವು ವಸ್ತುಗಳನ್ನು ನೋಡುವುದರಿಂದಲೂ ಕೆಲವನ್ನು ಕೇಳುವುದರಿಂದಲೂ ಕೆಲವನ್ನು ಸ್ಪರ್ಶನದಿಂದಲೂ ಇನ್ನು ಕೆಲವನ್ನು ಮೂಸಿ ನೋಡುವುದರಿಂದಲೂ ಅದರ ಕುರಿತು ನಾವು ತಿಳಿದುಕೊಳ್ಳುತ್ತೇವೆ. ಬಾಹ್ಯ ಜ್ಞಾನೇಂದ್ರಿಯಗಳಿಂದ ತಿಳಿಯಲು ಅಸಾಧ್ಯವಾದ ಅನೇಕ ವಸ್ತುಗಳೂ ಈ ಲೋಕದಲ್ಲಿವೆ. ಅವುಗಳ ಕಾರ್ಯ ಮತ್ತು ಪರಿಣಾಮಗಳಿಂದ ನಾವು ಅದರ ಕುರಿತು ತಿಳಿದುಕೊಳ್ಳುತ್ತೇವೆ. ಈ ಎಲ್ಲಾ ಅರಿವೂ ತಿಳಿವಳಿಕೆಯೂ ಅದು ಯಾವ ಮಾರ್ಗದಿಂದ ಸಿದ್ಧಿಸಿದ್ದಾದರೂ ಸರಿಯೆ, ಒಂದೇ ಪ್ರಕಾರ ದೃಢವೂ ವಿಶ್ವಾಸಯೋಗ್ಯವೂ ಆಗಿರುತ್ತದೆ. ಯಾವುದಾದರೂ ಒಂದು ವಸ್ತುವಿನ ಕುರಿತು ತಾನು ಹೇಳುವ ಮಾರ್ಗದಿಂದ ತಿಳಿದುಕೊಂಡಲ್ಲದೆ ಅದರ ಅಸ್ತಿತ್ವವನ್ನು ನಂಬಲಾರೆನೆಂದು ಹೇಳುವುದು ಬಾಲಿಶವಾಗಿದೆ. ನಿಜವಾದ ನಿಮ್ಮ ಉದ್ದೇಶವು ಯಾವುದಾದರೂ ವಿಧಾನದಿಂದ ಅದರ ಕುರಿತು ತಿಳಿದುಕೊಳ್ಳುವುದಾಗಿದೆ. ಅದು ಸಾಧ್ಯವಾಯಿತೆಂದಾದರೆ ನಿಮ್ಮ ಉದ್ದೇಶವು ಪೂರ್ತಿಯಾಯಿತು ಒಂದು ಕೋಣೆಯ ಭಿತ್ತಿಯನ್ನು ಭೇದಿಸಿ ಆ ದ್ವಾರದಿಂದ ಒಳಗೆ ಪ್ರವೇಶಿಸಿದರೆ ಮಾತ್ರವೇ ಅದರ ಒಳಭಾಗವನ್ನು ಕಂಡದ್ದಾಗಿ ನಂಬುವೆನೆಂದೂ, ಆ ಕೋಣೆಯ ಬಾಗಿಲನ್ನು ತೆರೆದು ಒಳಪ್ರವೇಶಿಸಿದರೆ ಒಪ್ಪಲಾರೆನೆಂದೂ, ಯಾರಾದರೂ ಹೇಳುವರೇ? ಹಾಗೆ ಹೇಳುವವನೊಡನೆ–ಎಲೈ ಮನುಷ್ಯಾ, ನಿನ್ನ ಉದ್ದೇಶವು ಗೋಡೆಯನ್ನು ಒಡೆಯುವುದೋ ಅಥವಾ ಕೋಣೆಯ ಒಳಗೆ ಪ್ರವೇಶಿಸುವುದೋ ಎಂದು ಕೇಳುತ್ತೇನೆ. ಕೋಣೆಯ ಒಳಹೊಕ್ಕರೆ ನಿಮ್ಮ ಉದ್ದೇಶವು ಪೂರ್ತಿಯಾಯಿತು. ಗೋಡೆಯನ್ನು ಒಡೆದೋ ಅಥವಾ ಬಾಗಿಲನ್ನು ತೆರೆದೋ ಎಂಬ ಪ್ರಶ್ನೆಗೆ ಅಲ್ಲಿ ಸ್ಥಾನವೇ ಇಲ್ಲ. ಕೋಣೆಯ ಒಳಗೆ ಪ್ರವೇಶಿಸಲು ಯಾವೊಂದು ಮಾರ್ಗವು ನಿಶ್ಚಯಿಸಲ್ಪಟ್ಟಿದೆಯೋ ಆ ಮಾರ್ಗದ ಮೂಲಕ ಮಾತ್ರವೇ ನಿಮಗೆ ಪ್ರವೇಶಿಸಲು ಸಾಧ್ಯ. ಅಲ್ಲದೆ ನಿಮ್ಮ ಇಷ್ಟಕ್ಕೆ ತಕ್ಕಂತಹ ಒಂದು ಮಾರ್ಗವು ನಿಮಗಾಗಿ ತೆರೆದಿಡಬೇಕೆಂಬ ವಾದವು ಅತಿಯಾದ ಬುದ್ಧಿಶೂನ್ಯತೆಯಾಗಿದೆ. ನೀವು ಹೇಳುವ ಮಾರ್ಗದಲ್ಲಿ ದೇವರು ನಿಮಗೆ ಪ್ರತ್ಯಕ್ಷಪಡಬೇಕೆಂಬ ನಿಮ್ಮ ವಾದವು ಸ್ವೀಕಾರ್ಯವೆಂದಾದರೆ ಯಾಕಾಗಿ ಇನ್ನೊಬ್ಬನ ವಾದವನ್ನು ಸ್ವೀಕರಿಸಬಾರದು? ಮತ್ತೊಬ್ಬನು ಮತ್ತೊಂದು ರೀತಿಯಲ್ಲೂ ಹೇಳುವನಲ್ಲವೇ? ಹೀಗೆ ಎಲ್ಲರ ವಾದವನ್ನೂ ಒಪ್ಪಬೇಕೆಂದಾದರೆ ಅದರ ಅರ್ಥವು ದೇವರು ನಿಮ್ಮೆಲ್ಲರ ಚಿಂತನೆಗೆ ತಕ್ಕಂತೆ ಲಭ್ಯವಾಗಬೇಕಾದ ಒಂದಾಗಿರಬೇಕೆಂದಲ್ಲವೇ? ನಿಮ್ಮ ಲೋಲವಾದ ಆಲೋಚನೆಗೆ ಹಾನಿಯಾಗದಿರಲೆಂಬಂತೆ ನೀವು ಪ್ರತಿಯೊಬ್ಬರೂ ಊಹಿಸುವ ಪ್ರಕಾರ ಒಬ್ಬ ನಟನಂತೆ ಅವನು ನಿಮ್ಮ ಮುಂದೆ ವೇಷಪಲ್ಲಟ ಮಾಡುತ್ತಿರಬೇಕೆಂದಲ್ಲವೇ? ಕಷ್ಟವೇ ಸರಿ!

ಸ್ನೇಹಿತರೇ, ಯಾವುದಾದರೂ ಒಂದು ವಸ್ತುವು ಎಷ್ಟು ಸ್ಥೂಲವಾಗಿರುವುದೋ, ಅದರ ಕುರಿತು ತಿಳಿದುಕೊಳ್ಳಲು ಮನುಷ್ಯನ ಬಾಹ್ಯೇಂದ್ರಿಯಕ್ಕೆ ಅದು ಅಷ್ಟೇ ಸಮೀಪವೂ ಒಂದು ವಸ್ತುವು ಎಷ್ಟು ಸೂಕ್ಷ್ಮವಾಗಿರುವುದೋ ಅದರ ಕುರಿತು ತಿಳಿದುಕೊಳ್ಳಲು ಮನುಷ್ಯನ ಜ್ಞಾನೇಂದ್ರಿಯಕ್ಕೆ ಅದು ಅಷ್ಟೇ ವಿದೂರವೂ ಆಗಿರುವುದೆಂದು ನೀವು ತಿಳಿದಿರಬೇಕು. ಈ ಕಾರಣದಿಂದಲೇ ಅತಿ ಸೂಕ್ಷ್ಮವಾದ ಪದಾರ್ಥಗಳ ಇರುವಿಕೆಯನ್ನು ತಿಳಿಯಲು ನಮಗೆ ಅದರ ಕಾರ್ಯ ಪರಿಣಾಮಗಳನ್ನು ನೋಡಬೇಕಾಗಿ ಬರುವುದು. ಮೇಲೆ ವಿವರಿಸಿದ ಉದಾಹರಣೆಗಳಂತೆ ಅವುಗಳ ಕುರಿತು ಬಾಹ್ಯೇಂದ್ರಿಯಗಳಿಂದ ನೇರವಾಗಿ ತಿಳಿದುಕೊಳ್ಳಲು ನಮ್ಮಿಂದ ಸಾಧ್ಯವಿಲ್ಲ. ಹೀಗಿರುವಾಗ ಅತ್ಯಂತ ಸೂಕ್ಷ್ಮನೂ, ಸಕಲ ಸೂಕ್ಷ್ಮ ವಸ್ತುಗಳ ಸೃಷ್ಟಿಕರ್ತನೂ ಆದ ದೇವರು ಬಾಹ್ಯೇಂದ್ರಿಯಗಳಿಗೆ

ಗೋಚರವಾಗುವುದು ಹೇಗೆ? ಸಂಕ್ಷಿಪ್ತವಾಗಿ, ಬಾಹ್ಯೇಂದ್ರಿಯಗಳಿಗೆ ಗೋಚರಿಸಿದ ಹೊರತು ದೇವರ ಅಸ್ತಿತ್ವವನ್ನು ನಂಬಲಾರೆನೆಂಬ ವಾದವು ತೀರಾ ಅಸಂಬದ್ಧವೂ ನಿರರ್ಥಕವೂ ಆಗಿದೆ. ಅದರ ಅರ್ಥವು ಅವರ ಅಭಿಪ್ರಾಯ ಪ್ರಕಾರ ದೇವರು ಒಂದು ಸ್ಥೂಲ ವಸ್ತುವೆಂದಾಗಿದೆ. ಅಥವಾ ತನ್ನ ಬಾಹ್ಯ ದೃಷ್ಟಿಗೆ ಗೋಚರವಾಗುವಂತೆ ಅವನು ಒಂದು ಸ್ಥೂಲರೂಪವನ್ನು ತಾಳಬೇಕೆಂದಾಗಿದೆ. ಅವರ ಈ ಹೇಳಿಕೆಯನ್ನು ಸ್ವೀಕರಿಸಿದಲ್ಲಿ ಲೋಕದಲ್ಲಿರುವ ಲಕ್ಷಗಟ್ಟಳೆ ಕುರುಡರ ಕುರಿತು ಏನು ಹೇಳುತ್ತೀರಿ? ನಮಗಾಗಿ ದೇವರು ಕೇಳಿ ತಿಳಿದುಕೊಳ್ಳಲಿಕ್ಕೋ ಮುಟ್ಟಿ ನೋಡಲಿಕ್ಕೋ ರುಚಿಸಿ ತಿಳಿಯಲಿಕ್ಕೋ ಸಾಧ್ಯವಾಗುವಂತೆ ರೂಪ ತಾಳಬೇಕೆಂದು ಹೇಳಲು ಅವರಿಗೂ ಹಕ್ಕಿಲ್ಲವೇ? ದೇವರ ಕುರಿತು ಅಪಹಾಸ್ಯಕರವಾದ ಇಂತಹ ವಾದಗಳನ್ನು ಮುಂದಿಡುವುದು ಆತ್ಮವೂ ಬುದ್ಧಿಯೂ ಇದೆಯೆಂದು ಅಭಿಮಾನಿಸುವ ಮನುಷ್ಯನಿಗೆ ಲಜ್ಜಾತ್ಮಕವಲ್ಲವೇ? ಬಾಹ್ಯವಾದ ಈ ಕಣ್ಣುಗಳಿಂದ ಕಂಡದ್ದಲ್ಲದೆ ದೇವರನ್ನು ನಂಬಲಾರೆವು ಎಂದು ನೀವು ಹೇಳುತ್ತೀರಿ; ದೇವರು ಬಾಹ್ಯವಾದ ಈ ಕಣ್ಣುಗಳಿಗೆ ಗೋಚರವಾದಲ್ಲಿ ಅವನನ್ನು ನಂಬುವುದು ಸುಲಭವಾಗುವುದೇನೋ ಇರಲಿ, ಅವನು ನಂಬಲಿಕ್ಕೇ ಅಯೋಗ್ಯನಾಗಿ ಬಿಡುವನು ಏಕೆಂದರೆ, ಈ ಅವಸ್ಥೆಯಲ್ಲಿ ಅವನ ಬೇರೆ ಕೆಲವು ಗುಣಗಳನ್ನು ನಮಗೆ ನಿರಾಕರಿಸಬೇಕಾಗಿ ಬರುವುದು. ಉದಾಹರಣೆಗೆ ದೇವರು ಸೂಕ್ಷ್ಮನಾಗಿರುವನು. ಈ ಅವಸ್ಥೆಯಲ್ಲಿ ಅವನು ಒಂದು ಸ್ಥೂಲ ವಸ್ತುವಾಗಿ ಬಿಡುತ್ತಾನೆ. ಅವನು ಅಪರಿಮಿತನಾಗಿರುವನು. ಆದರೆ ಈ ಸ್ಥಿತಿಯಲ್ಲಿ ಅವನು ಪರಿಮಿತನಾಗುವನು. ನಿಮಗೆ ನಂಬಲು ಅನುಕೂಲವಾಗುವಂತೆ ಅವನು ಸ್ಥೂಲನೂ ಪರಿಮಿತನೂ ಆಗಿ ಮಾರ್ಪಟ್ಟಲ್ಲಿ ಸ್ಥೂಲನೂ ಪರಿಮಿತನೂ ಆಗಿರುವ ದೈವವು ದೈವವಾಗಿರಲು ಅರ್ಹನಲ್ಲವೆಂದು ನೀವನನ್ನು ನಿರಾಕರಿಸಲಾರಿರಿ ಎಂಬುದಕ್ಕೆ ಆಧಾರವೇನಿದೆ? ದೇವರಾದರೆ, ಎಷ್ಟೊಂಗು ಪವಿತ್ರನೂ, ಎಷ್ಟೊಂದು ನಿರ್ಮಲನೂ ಎಷ್ಟು ಮಾತ್ರ ಪರಿಪೂರ್ಣನೂ ಆಗಿರುವನು! ಅವನ ಪ್ರತಿಯೊಂದು ಗುಣವೂ ಮತ್ತೊಂದು ಗುಣಕ್ಕೆ ಕಾವಲಾಗಿ ನಿಲ್ಲುತ್ತದೆ. ಅವನ ಯಾವುದೇ ಗುಣದ ಮೇಲೆ ಆಕ್ರಮಣ ನಡೆಸಲು ಯಾರಿಂದಲೂ ಸಾಧ್ಯವಿಲ್ಲ. ಹಾಗೆ ಮಾಡಿದಲ್ಲಿ ಅವನ ಮತ್ತೊಂದು ಗುಣವು ಎಚ್ಚೆತ್ತು, ಕರ್ತವ್ಯ ಬೋಧವಿರುವ ಕಾವಲುಗಾರನಂತೆ ಆ ಆಕ್ರಮಿಯನ್ನು ವಿಫಲಗೊಳಿಸಿ ಅಪಮಾನದ ಪಾತಾಳಕ್ಕೆ ಅಪ್ಪಳಿಸುವುದು. 'ಅದೃಶ್ಯನು' ಎಂಬ ದೈವಿಕ ಗುಣದ ಮೇಲೆ ಎತ್ತಲ್ಪಟ್ಟ ಆಕ್ಷೇಪದ ಅವಸ್ಥೆಯನ್ನು ನೀವೀಗ ಕಂಡಿರಿ. ಸೂಕ್ಷ್ಮನೂ ಅಪರಿಮಿತನೂ ಆಗಿರುವನೆಂಬ ಅವನ ಗುಣಗಳು ತಕ್ಷಣವೇ ಮುಂದೆ ಬಂದು ಆ ಆಕ್ಷೇಪವನ್ನು ಬಡಿದೊಡೆಯಿತು. ಅದೃಶ್ಯನಾಗಿದ್ದುಕೊಂಡೇ ಕಣ್ಣ ಮುಂದೆ ಬಂದು ನಿಲ್ಲುವುದು, ಅಂತರ್ಯಾಮಿಯಾಗಿಯೇ ಪ್ರತ್ಯಕ್ಷನಾಗಿ ಕಾಣಲ್ಪಡುವುದು, ಸೂಕ್ಷ್ಮನಾಗಿದ್ದೂ ಸ್ಥೂಲ ವಸ್ತುಗಳನ್ನು ಮೀರುವಂತೆ ಗೋಚರಿಸುವುದು ಎಂಬಿತ್ಯಾದಿ ಗುಣಗಳಲ್ಲೇ ಖಂಡಿತವಾಗಿಯೂ ಪರಮಾತ್ಮನ ಮಹಾತ್ಮೆಯು ನೆಲೆಗೊಂಡಿದೆ. ಈ ಸತ್ಯವನ್ನು ಗ್ರಹಿಸದವರು ನಿರ್ಭಾಗ್ಯರಷ್ಟೆ. ಅವರು ವಿನಾಶದ ಬಾಗಿಲಲ್ಲಿರುವರು.

ಒಟ್ಟಿನಲ್ಲಿ ದೇವರು ಸೂಕ್ಷನೂ ಬಾಹ್ಯದೃಷ್ಟಿಗೆ ಅಗೋಚರನೂ ಆಗಿರುವನೆಂಬುದು ಅವನ ಪರಿಪೂರ್ಣತೆಗೆ ಅನುಯೋಜ್ಯವೂ ಅನಿವಾರ್ಯವೂ ಆಗಿದೆ. ಆದರೆ ಈ ಕಾರಣದಿಂದ ಅವನ ಅಸ್ಥಿತ್ವದ ಕುರಿತು ಏನಾದರೂ ಸಂಶಯವುಂಟಾಗಲು ಎಂದಿಗೂ ಸಾಧ್ಯವಿಲ್ಲ. ಯಾಕೆಂದರೆ ಅವನನ್ನು ತಿಳಿದುಕೊಳ್ಳಲು ನಮ್ಮ ಈ ಬಾಹ್ಯವಾದ ಕಣ್ಣುಗಳಿಗಿಂತಲೂ ಹೆಚ್ಚು ಸುದೃಢವೂ ಖಂಡಿತವೂ ಆದ ಇತರ ಹಲವು ಮಾರ್ಗಗಳು ತೆರೆದಿಡಲ್ಪಟ್ಟಿವೆ. ಆದುದರಿಂದ ಮಿತ್ರರೇ, ಇಂತಹ ನಿರರ್ಥಕವಾದ ಸಂಶಯನಿಮಿತ್ತ ಸತ್ಯ ವಿಶ್ವಾಸದಂತಹ ಅನರ್ಘ್ಯ ವಸ್ತುವನ್ನು ನೀವು ಕೈಬಿಡಬೇಡಿರಿ. ನೋಡದೆಯೇ ಕಾಂತಶಕ್ತಿಯನ್ನೂ ವಿದ್ಯುಚ್ಛಕ್ತಿಯನ್ನೂ ನೀವು ನಂಬುತ್ತೀರಿ. ಸಮಯ ಮತ್ತು ಕಾಲದ ಆಧಿಪತ್ಯವನ್ನು ಒಪ್ಪುತ್ತೀರಿ. ಪ್ರೇಮದ ಮತ್ತು ಕೋಪದ ಮುಂದೆ ತಲೆಬಾಗಿಸುತ್ತೀರಿ. ಆದರೆ ನಿಮ್ಮ ಕರ್ತನೂ ಯಜಮಾನನೂ ಆದವನಿಗೆ ಸ್ನೇಹಾದರಗಳನ್ನರ್ಪಿಸಲು ನೀವು ತಯಾರಿಲ್ಲವೋ? ಪ್ರಿಯರೇ, ನೀವು ಆ ರೀತಿ ಎಂದೂ ಮಾಡದಿರಿ.

('ಹಮಾರಾ ಖುದಾ' ಎಂಬ ಗ್ರಂಥದಿಂದ
ಕನ್ನಡಕ್ಕೆ: ಎಂ. ಪಿ. ಇಬ್ರಾಹಿಂ.)

—೦—೦—೦—

# ಲಂಡನಿನ ಅಂತಾರಾಷ್ಟ್ರೀಯ ಮುಸ್ಲಿಮ್ ಸಮ್ಮೇಳನದಲ್ಲಿ ರಾಜಕುಮಾರ ಮುಹಮ್ಮದುಲ್ ಫೈಸಲ್‌ರ ಭಾಷಣ

● ಮೌಲಾನ ಶರೀಫ್ ಅಹ್ಮದ್ ಅಮೀನಿ H. A.

ಇತ್ತೀಚೆಗೆ ಲಂಡನಿನಲ್ಲಿ ಅಂತಾರಾಷ್ಟ್ರೀಯ ಮುಸ್ಲಿಮ್ ಪ್ರಥಮ ಸಮ್ಮೇಲನವು ನಡೆಯಿತು. ಇದರ ಕಾರ್ಯವಿಧಾನವನ್ನು ಯುರೋಪಿನ ಇಸ್ಲಾಮಿ ಕೌನ್ಸಿಲ್ ರೂಪೀಕರಿಸಿತು. ಈ ಸಮ್ಮೇಲನವು ಮೂರು ತಿಂಗಳಷ್ಟು ಕಾಲ ನಿರಂತರವಾಗಿ ನಡೆಯುತ್ತಿರುವ ಒಂದು ಇಸ್ಲಾಮಿ ಪ್ರದರ್ಶನದ ಭಾಗವಾಗಿತ್ತು.(ಈ ಪ್ರದರ್ಶನ 1976ರ ಆಗಸ್ಟ್ ತಿಂಗಳಲ್ಲಿ ಕೊನೆಗೊಳ್ಳುವುದು). ಈ ಇಸ್ಲಾಮಿ ಪ್ರದರ್ಶನವನ್ನು ಲಂಡನಿನಲ್ಲಿ ಮಹಾರಾಣಿ ಎಲಿಝಬೆತ್ II ಉದ್ಘಾಟಿಸಿದರು. ಈ ಪ್ರದರ್ಶನದ ಮೂಲಕ ಇಸ್ಲಾಮಿ ಧರ್ಮ, ಸಂಸ್ಕೃತಿ, ಕಲೆ ವಿಜ್ಞಾನ, ಸಾಹಿತ್ಯ ಮತ್ತು ನಾಗರಿಕತೆಯ ಕುರಿತು ಯುರೋಪಿನ ಜನರಿಗೆ ತಿಳಿಸಿ ಕೊಡುವುದು ಇದರ ಉದ್ದೇಶವಾಗಿದೆ. ಯುರೋಪಿನ ಇಸ್ಲಾಮಿ ಕೌನ್ಸಿಲಿನ ಸೆಕ್ರಿಟರಿ ಜನರಲ ರಾದ ಸಲೀಮ್ ಆಝಮ್‌ರವರು ತಮ್ಮ ಸ್ವಾಗತ ಭಾಷಣದಲ್ಲಿ ಈ ರೀತಿ ಹೇಳಿದರು:

"ಈ ಪ್ರದರ್ಶನ ಮತ್ತು ಸಮ್ಮೇಳನ ಯಾವುದೇ ರಾಜಕೀಯ ಉದ್ದೇಶದಿಂದ ಸಂಘಟಿತವಾಗಿಲ್ಲ. ಇದರ ಮುಖ್ಯೋದ್ದೇಶ ಇಸ್ಲಾಮನ್ನು ಪವಿತ್ರ ಖುರ್‌ಆನ್ ಮತ್ತು ಪವಿತ್ರ ನಬಿಯವರ ನಡೆವಳಿಕೆಯ ಆಧಾರದಿಂದ ಸರಿಯಾದ ರೂಪದಲ್ಲಿ ಜನರ ಮುಂದಿರಿಸುವುದಾಗಿದೆ."

1976ನೇ ಎಪ್ರಿಲು 4ರಂದು ಸೌದಿ ಅರೇಬಿಯಾದ ರಾಜಕುಮಾರ ಮುಹಮ್ಮದುಲ್ ಫೈಸಲರು (ತೀರಿ ಹೋದ ಫೈಸಲ್‌ರಾಜರ ಮಗ) ರೋಯಲ್ ಆಲ್ಬರ್ಟ್ ಹಾಲಿನಲ್ಲಿ ನಡೆದ ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸುತ್ತಾ ಮುಸ್ಲಿಮೇತರರನ್ನು ಸಂಬೋಧಿಸಿ ಈ ರೀತಿ ನುಡಿದರು:

"ಮುಸ್ಲಿಮೇತರರು ಇಸ್ಲಾಮನ್ನು ಮುಸ್ಲಿಮರ ನ್ಯೂನತೆಯ ಪ್ರಕಾಶದಲ್ಲಿ ವೀಕ್ಷಿಸದಿರಲಿ. ಇಸ್ಲಾಮನ್ನು ಅವರು ಪವಿತ್ರ ಖುರ್‌ಆನ್, ಪವಿತ್ರ ನಬಿಯವರ ನಡೆ ವಳಿಕೆಗಳು ಮತ್ತು ಪವಿತ್ರ ನಬಿಯವರ ಮೂಲ ಉಪ ದೇಶಗಳಲ್ಲಿ ನೋಡಲಿ .... ಪ್ರಾಯಶಃ ನಾವು ಇಸ್ಲಾ ಮಿನ ಉತ್ತಮ ಮಾದರಿಯಾಗಿರಲಾರೆವು. ಇಸ್ಲಾಮ್ ಯಾವುದೇ ಗುಂಪಿನ ಪಿತ್ರಾರ್ಜಿತ ಸೊತ್ತಲ್ಲ. ಇಸ್ಲಾಮ್ ದೇವರ ಸಂದೇಶವಾಗಿದೆ. ಈ ಸಂದೇಶ ಎಲ್ಲಾ ಮನು ಷ್ಯರಿಗಾಗಿ ಇದೆ.'' ರಾಜಕುಮಾರರು ಈ ರೀತಿಯೂ ಹೇಳಿದರು:

ಎಲ್ಲಾ ಭೌತಿಕ ಮತ್ತು ಮಾನವೀಯ ಶಕ್ತಿಗಳನ್ನು ಉತ್ತಮ ನೀತಿ, ನ್ಯಾಯ ಮತ್ತು ಶಾಂತಿಗಾಗಿ ಉಪ ಯೋಗಿಸುವುದೇ ಇಸ್ಲಾಮಿನ ಉದ್ದೇಶವಾಗಿದೆ''. ('ಇಂಕಿಲಾಬ್', ಉರ್ದು ದಿನಪತ್ರ, ಮುಂಬಯಿ, 6-4-76).

ಅಂತಾರಾಷ್ಟ್ರೀಯ ಇಸ್ಲಾಮಿ ಸಮ್ಮೇಳನದ ಕುರಿತು ಮತ್ತು ರಾಬಿತ ಆಲಮೇ ಇಸ್ಲಾಮಿ (ಮಕ್ಕಾ ದಲ್ಲಿರುವ ಅಂತಾರಾಷ್ಟ್ರೀಯ ಮುಸ್ಲಿಮ್ ಸಂಸ್ಥೆ)ಯವ ರಿಗೆ ಚಿಂತಾರ್ಹವಾದ ಕೆಲವು ಸಂಗತಿಗಳನ್ನು ಈ ರೀತಿ ನಿವೇದಿಸುತ್ತೇನೆ:

**ಒಂದು:** ಇಸ್ಲಾಮನ್ನು ಯಥಾರ್ಥ ರೂಪ ದಲ್ಲಿ ಪವಿತ್ರ ಖುರ್‌ಆನ್ ಮತ್ತು ನಬಿ ವಚನಗಳ ಆಧಾರದಿಂದ ಸ್ಪಷ್ಟಪಡಿಸುವ ಸಮ್ಮೇಲನದ ಉದ್ದೇಶವು ಅತ್ಯುತ್ತಮವೂ ಪ್ರಶಂಸಾರ್ಹವೂ ಆಗಿದೆ. ಇದರ ಜೊತೆ ಯಲ್ಲೇ ಈಗಿನ ಭೌತಿಕ ಸುಖಲೋಲುಪತೆಯ ಈ ಕಾಲ ದಲ್ಲಿ ಈ ಯಥಾರ್ಥ ಇಸ್ಲಾಮ್ ಕಾರ್ಯರೂಪದಲ್ಲಿ

ಎಲ್ಲಿ ಮತ್ತು ಯಾವ ಜನಾಂಗದಲ್ಲಿ ಕಂಡುಬರುತ್ತದೆ ಎಂದು ತಿಳಿಯಲು ಜನರು ಉತ್ಸುಕರಾಗಿದ್ದಾರೆ. ಏಕೆಂದರೆ ನಾವು ಕ್ಷಮಾಯಾಚನೆಯ ಧ್ವನಿಯಲ್ಲಿ:

"ಮುಸ್ಲಿಮೇತರರು ಇಸ್ಲಾಮನ್ನು ಮುಸ್ಲಿಮರ ನ್ಯೂನತೆಯ ಪ್ರಕಾಶದಲ್ಲಿ ವೀಕ್ಷಿಸದಿರಲಿ.... ಪ್ರಾಯಶ: ನಾವು ಇಸ್ಲಾಮಿನ ಉತ್ತಮ ಮಾದರಿಯಾಗಿರಲಾರೆವು.... ಇಸ್ಲಾಮನ್ನು, ಪವಿತ್ರ ಖುರ್, ಪವಿತ್ರ ನಬಿಯವರ ನಡೆವಳಿಕೆಗಳು, ಮತ್ತು ಪವಿತ್ರ ನಬಿಯವರ ಮೂಲ ಉಪದೇಶಗಳಲ್ಲಿ ನೋಡಲಿ'' ಎಂದು ಹೇಳಿದರೆ, ಮುಸ್ಲಿಮೇತರರು ಒಬ್ಬ ಕವಿ ನುಡಿದಂತೆ ಈ ರೀತಿ ಹೇಳಬಲ್ಲರು:

"ಯಥಾರ್ಥ ಮುಸ್ಲಿಮರೆಲ್ಲರೂ ಮರಣ ಹೊಂದಿರುವರು; ಈಗ ಇಸ್ಲಾಮ್ ಬರೇ ಗ್ರಂಥದಲ್ಲಿ ಮಾತ್ರ ಉಳಿದಿದೆ.''

ನಮ್ಮಲ್ಲಿ ಯಥಾರ್ಥ ಇಸ್ಲಾಮ್ ಇಲ್ಲವೆಂದು ನಾವು ಸ್ವತ: ಘೋಷಿಸಿದರೆ ನಾವು ಇತರರನ್ನು ಇಸ್ಲಾಮಿಗೆ ಯಾವ ರೀತಿ ಆಹ್ವಾನಿಸಬಲ್ಲೆವು? ಅಮುಸ್ಲಿಮರು ಈ ರೀತಿ ಹೇಳುವರು:

"ಇಸ್ಲಾಮಿಗೆ ಆಹ್ವಾನಿಸುವ ನೀವು ಸ್ವತ: ಇಸ್ಲಾಮಿನ ತತ್ವಗಳನ್ನು ಅನುಸರಿಸುವುದಿಲ್ಲವಾದರೆ ನಾವು ಯಾವ ರೀತಿ ಆ ತತ್ವಗಳನ್ನು ಅನುಸರಿಸಬಲ್ಲೆವು.''

ಈ ಪರಿಸ್ಥಿತಿಯಲ್ಲಿ ಯುರೋಪಿನಲ್ಲಿ ಇಸ್ಲಾಮಿನ ಆಹ್ವಾನ ಕೊಡುವವರು ಕ್ಷಮಾಯಾಚನೆಯ ರೀತಿಯನ್ನು ಕೈಗೊಳ್ಳದೆ ಇಸ್ಲಾಮಿಗೆ ಆಹ್ವಾನಿಸುವ ಜೊತೆಯಲ್ಲಿ ತಮ್ಮ ನಡೆ ನುಡಿಗಳನ್ನು ಇಸ್ಲಾಮೀಕರಿಸಿ ಅದರಿಂದ ಇತರರು ಇಸ್ಲಾಮಿಗೆ ಆಕರ್ಷಿತರಾಗುವಂತೆ ಮಾಡುವುದು ಅತ್ಯಾವಶ್ಯಕವಾಗಿದೆ.

**ಎರಡು:** ಪವಿತ್ರ ಖುರ್ ಮತ್ತು ಪವಿತ್ರ ನಬಿಯವರ ಜೀವನ ಚರಿತ್ರೆಯನ್ನು ಪಾರಾಯಣ ಮಾಡಿದರೆ ಇಸ್ಲಾಮ್ ಶಾಂತಿ, ಸಮಾಧಾನ, ಮತಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ನೇಹ ಸೌಹಾರ್ದಗಳನ್ನು ಉಪದೇಶಿಸುತ್ತದೆಯೆಂದೂ ಮತದ ಹೆಸರಿನಲ್ಲಿ ಹಿಂಸೆ ಮತ್ತು ದಬ್ಬಾಳಿಕೆಗಳನ್ನು ನಿರೋಧಿಸುತ್ತದೆಯೆಂದೂ ತಿಳಿಯುತ್ತದೆ. ಸರ್ವರ ಏಳಿಗೆ ಮತ್ತು ಬಾಳ್ವಿಕೆ, ಸ್ವತ: ಜೀವಿಸಿ ಇತರರನ್ನು ಜೀವಿಸಲು ಬಿಡುವುದು ಮೊದಲಾದ ಉತ್ತಮವಾದ ಉಪದೇಶಗಳನ್ನು ಅದು ನೀಡುತ್ತದೆ. ಪವಿತ್ರ ನಬಿಯವರು ಧರ್ಮದ ಕಾರಣದಿಂದ ಯಾರನ್ನೂ ಹಿಂಸಿಸಲಿಲ್ಲ. ಅವರು ಸ್ವತ: ಹಿಂಸೆಯನ್ನು ಸಹಿಸಿದರು. ಅಧಿಕಾರವನ್ನೂ ಶಕ್ತಿಯನ್ನೂ ಪಡೆದಾಗ "ಮತದಲ್ಲಿ ಬಲಾತ್ಕಾರವಿಲ್ಲ'' ವೆಂಬ ಪವಿತ್ರ ಖುರ್‌ಆನಿನ ಮತಸ್ವಾತಂತ್ರ್ಯವನ್ನೂ ವ್ಯಕ್ತಿ ಸ್ವಾತಂತ್ರ್ಯವನ್ನೂ ಘೋಷಿಸುವ ವಚನ ಅವರ ದಾರಿ ದೀಪವಾಗಿತ್ತು.

ಈಗಿನ ಮುಸ್ಲಿಮರು ವಿಶ್ವಾಸಗಳ ಭಿನ್ನತೆಯ ಕಾರಣದಿಂದ ತಮ್ಮೊಳಗೆಯೇ ಜಗಳವಾಡುತ್ತಾ ಇದ್ದು ಪರಸ್ಪರರನ್ನು ಅವಿಶ್ವಾಸಿಗಳೆಂದು ಘೋಷಿಸುವುದು ಪ್ರಿಯಕರವಾದ ಹವ್ಯಾಸವಾಗಿ ಕೈಗೊಂಡಿದ್ದರೆ, ಮತದ ಹೆಸರಿನಲ್ಲಿ ಹಿಂಸಾಚಾರ ಮಾಡುವುದು ಅವರ ಸ್ವಭಾವವಾಗಿ ಪರಿಣಮಿಸಿದ್ದರೆ, ಇಂತಹವರು ಇತರರನ್ನು ಯಥಾರ್ಥ ಇಸ್ಲಾಮಿಗೆ ಯಾವ ರೀತಿ ಆಹ್ವಾನಿಸಬಲ್ಲರು? ಇಸ್ಲಾಮ್ ಶಾಂತಿಯ ಮತವಾಗಿದೆ. ಮುಸ್ಲಿಮರು ತಮ್ಮ ಆಂತರಿಕ ವೈರವನ್ನು ಕೊನೆಗೊಳಿಸಿ ಇಸ್ಲಾಮಿನ ಆದರ್ಶ ತತ್ವಗಳನ್ನು ಅನುಸರಿಸಿ ಜೀವಿಸುವುದು ಅತ್ಯಂತ ಅಗತ್ಯವೂ ಅನಿವಾರ್ಯವೂ ಆಗಿದೆ.

**ಮೂರು:** ರಾಜಕುಮಾರ ಫೈಸಲ್ ಎಷ್ಟು ಚೆನ್ನಾಗಿ ನುಡಿದಿರುವರು:

"ಇಸ್ಲಾಮ್ ಯಾವುದೇ ಗುಂಪಿನ ಪಿತ್ರಾರ್ಜಿತ ಸೊತ್ತಲ್ಲ. ಅದು ದೇವರ ಸಂದೇಶವಾಗಿದೆ. ಈ ಸಂದೇಶ ಎಲ್ಲಾ ಮನುಷ್ಯರಿಗಾಗಿ ಇದೆ.''

ಇದು ಯಥಾರ್ಥದ ಉತ್ತಮ ನಿರೂಪಣೆಯಾಗಿದೆ. ಇದನ್ನು ತಿಳಿದು ಸಹ ರಾಬಿತ ಅಲಮೇ ಇಸ್ಲಾಮಿ ಜಿದ್ದಾ ನಗರ ಮತ್ತು ಮಕ್ಕಾ ನಗರಗಳಲ್ಲಿ ಸಮ್ಮೇಲನ ನಡೆಸಿ ಪವಿತ್ರ ಖುರ್‌ಆನ್ ಮತ್ತು ನಬಿ ವಚನಗಳಲ್ಲಿ ಅಚಲವಾದ ನಂಬಿಕೆ ಹೊಂದಿರುವ ಮತ್ತು ಇಸ್ಲಾಮೀ ತತ್ವಗಳನ್ನು ಪೂರ್ಣವಾಗಿ ಅನುಸರಿಸುವ, ಪ್ರಪಂಚದಲ್ಲೆಲ್ಲಾ ಇಸ್ಲಾಮಿನ ಪ್ರಚಾರ ಮಾಡುತ್ತಿರುವ ಅಹ್ಮದಿಯರನ್ನು ಇಸ್ಲಾಮಿನಿಂದ ದೂರ ಹೋದವರೆಂದೂ ಅಮುಸ್ಲಿಮರೆಂದೂ ಘೋಷಿಸಲು ಧೈರ್ಯಗೊಂಡುದು ಹೇಗೆ? ಏನು ಇಸ್ಲಾಮ್ ಅರಬಿಗಳ ಅಥವಾ ರಾಬಿತ ಅಲಮೇ ಇಸ್ಲಾಮೀನ ಪಿತ್ರಾರ್ಜಿತ ಸೊತ್ತೇ? ಇಸ್ಲಾಮ್ ಈಗ ದೇವರ ಸಂದೇಶವಾಗಿ ಬಾಕಿಯಾಗಿಲ್ಲವೇ?

ರಾಜಕುಮಾರ ಫೈಸಲ್ ಹೇಳಿದ ಪ್ರಕಾರ ಇಸ್ಲಾಮ್ ಯಾವುದೇ ಗುಂಪಿನ ಪಿತ್ರಾರ್ಜಿತ ಸೊತ್ತೋ ಸ್ವಯಾರ್ಜಿತ ಆಸ್ತಿಯೋ ಅಲ್ಲ. ಅದು ದೇವರ ಸಂದೇಶವಾಗಿದೆ. ಇದು ಎಲ್ಲಾ ಜನರಿಗಾಗಿ ಇದೆ. ಈ ಇಸ್ಲಾಮನ್ನು ಸ್ವೀಕರಿಸಿ, ತಮ್ಮದನ್ನಾಗಿ ಮಾಡಿ, ಪ್ರಚಾರಗೊಳಿಸುವವರು ಅಹ್ಮದಿಗಳಾಗಿರುವರು. ಅವರಿಗೆ ತಮ್ಮ ಧರ್ಮ ಇಸ್ಲಾಮ್ ಎಂದೆನ್ನಲೂ ತಾವು ಮುಸ್ಲಿಮರೆಂದು ಹೇಳಲೂ ಅಭಿಮಾನವಿದೆ. ಅಹ್ಮದಿಗಳಿಗೆ ತಾವು ಮುಸ್ಲಿಮರೆಂದು ಯಾವುದೇ ಸರಕಾರದ ಅಥವಾ ರಾಬಿತದ ಸರ್ಟಿಫಿಕೇಟಿನ ಅಗತ್ಯವಿಲ್ಲ. ಯಾರು ದೇವರ ದೃಷ್ಟಿಯಲ್ಲಿ ಮುಸ್ಲಿಮರೋ ಅವರೇ ಮುಸ್ಲಿಮರು. ಆದರೆ ರಾಬಿತ ಆಲಮೇ ಇಸ್ಲಾಮಿ ಸಂಸ್ಥೆ ಅಹ್ಮದಿಗಳನ್ನು ಅಮುಸ್ಲಿಮರೆಂದು ಯಾವ ಅಧಿಕಾರದ ಆಧಾರದಿಂದ ಘೋಷಿಸಿತೆಂದು ಪುನರಾಲೋಚನೆ ಮಾಡುವುದು ಯುಕ್ತವಾಗಿದೆ. ಏನು, ರಾಬಿತ ಆಲಮೆಯು ಕೈಗೊಂಡ ಕ್ರಮವು ಯಥಾರ್ಥವಾಗಿ ದೇವರ ಆಜ್ಞೆಗಳ ಉಲ್ಲಂಘನೆಯಲ್ಲವೇ ?

—o—o—o—


**For your needs in empty gunnies, always rely on**

Phone No. **74803**

# JANATHA STORES

**9/211 Gunny Street, CALICUT - 673001.**

---

Phone: **73196** Phone Branch: **75849**

**ಉತ್ತಮ ತರದ ಮರಗೆಣಸಿನ ಚಿಪ್ಸ್ ಮತ್ತು ಹಿಟ್ಟಿನ ರಖಂ ವ್ಯಾಪಾರಸ್ಥರು**

## KESSEE TRADING CORPORATION

Dealers in: **Tapioca** Chips & Flour

**9/135, Gunny Street, CALICUT - 1.**

---

Phone: 75849 GST No. K-191 CSR No. K-125

ಶುಂಠಿ ಕರಿಮೆಣಸು, ಮರಗೆಣಸು, ಹರಸಿನ ಮತ್ತು ಇತರ ಕಾಡು ಉತ್ಪತ್ತಿಗಳ ಪ್ರಸಿದ್ಧ ವ್ಯಾಪಾರಿಗಳು

## KECEE & COMPANY,

MERCHANTS & COMMISSION AGENTS

**9/231, Copra Bazaa, CALICUT-1.**

# ಈಸಾನಬಿಯ (ಯೇಸುಕ್ರಿಸ್ತರ) ವಯಸ್ಸು 130

—'ಅಲ್‌ಜಮಿಯ್ಯತ್'

'ಜಮಿಯ್ಯತುಲ್ ಉಲಮಾ ಹಿಂದ್'ನ ಮುಖಪತ್ರವಾದ ದೆಹಲಿಯ 'ಅಲ್ ಜಮಿಯ್ಯತ್' ಪತ್ರಿಕೆಯಲ್ಲಿ ಇದೇ ಕಳೆದ ಫೆಬ್ರುವರಿ 6ರ ಸಂಚಿಕೆಯಲ್ಲಿ "ಪ್ರಶಸ್ತರಾದ ಪ್ರವಾದಿಗಳ ವಯಸ್ಸುಗಳು'' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಈಸಾನಬಿಯ ಪ್ರಾಯ 130 ಆಗಿತ್ತು ಎಂದು ವ್ಯಕ್ತಪಡಿಸಲಾಗಿದೆ. ಆದಂ ಪ್ರವಾದಿಯಿಂದ ಮುಹಮ್ಮದ್ ಪೈಗಂಬರರ ವರೆಗೆ 17 ಪ್ರವಾದಿಗಳ ಹೆಸರು ಮತ್ತು ಪ್ರಾಯಗಳನ್ನು ಲೇಖನದಲ್ಲಿ ವಿವರಿಸಲಾಗಿದೆ. ರಾಂಪುರದ ಫಸಲ್‌ಷಾ ಫಸಲ್ ಅವರು ಇದರ ಲೇಖಕ. ಈಸಾನಬಿಯವರನ್ನು ಕುರಿತು ಅದರಲ್ಲಿ ಈ ರೀತಿಯಲ್ಲಿ ಬರೆಯಲಾಗಿದೆ.

**"16 ಈಸಾನಬಿ (ಅ.) — 130 ವರ್ಷ.''**

ಈಸಾನಬಿಯ ಕುರಿತು ಜಮಿಯ್ಯತುಲ್ ಉಲಮಾ ಇಷ್ಟರ ವರೆಗೆ ನಂಬಿಕೊಂಡು ಬಂದ ವಿಶ್ವಾಸವನ್ನು ಅವರು ತ್ಯಜಿಸಿದರೆಂದು ಈ ವಾಕ್ಯವು ಸ್ಪಷ್ಟಪಡಿಸುತ್ತದೆ. ಇತರ ಪ್ರವಾದಿಗಳ ಹಾಗೆಯೇ ಈಸಾನಬಿಯವರು ಸಹ ಸಾಧಾರಣ ರೀತಿಯಲ್ಲಿ ಮೃತಿ ಹೊಂದಿದರೆಂದು ಜಮಿಯ್ಯತುಲ್ ಉಲಮಾದ ಈಗಿನ ವಿಶ್ವಾಸವೆಂದು ಘೋಷಿಸುವುದಕ್ಕೆ ಇದು ಸಮವಾಗಿದೆ. ಕಳೆದ 86 ವರುಷಗಳಿಂದೀಚೆಗೆ ಅಹ್ಮದಿಯರಿಗೂ ಅಹ್ಮದಿಯೇತರ ಮುಸ್ಲಿಮರಿಗೂ ತಮ್ಮೊಳಗೆ ನೆಲೆಗೊಂಡಿದ್ದ ಪ್ರಮುಖ ತರ್ಕ ವಿಷಯಗಳಲ್ಲಿ ಒಂದು ಇದಾಗಿದೆ. ಈ ತರ್ಕದಲ್ಲಿ ಜಮಿಯ್ಯತುಲ್ ಉಲಮಾದ ಆದರಣೀಯರಾದ ಸದಸ್ಯರು ಅಹ್ಮದಿಯಾ ಸಂಘಟನೆಯ ಸ್ಥಾಪಕರು ಎತ್ತಿಹಿಡಿದ ವಿಶ್ವಾಸ ತತ್ವವೇ ಸತ್ಯವೆಂದು ಕೊನೆಗೆ ಅಸಂದಿಗ್ಧವಾಗಿ ಪ್ರಖ್ಯಾಪಿಸಿರುವರು. ಈಸಾನಬಿ ಮೃತಪಟ್ಟಿರುವರೆಂಬ ವಿಶ್ವಾಸವನ್ನು ಘೋಷಿಸಿದಾಗ ಈ ಉಲಮಾಗಳು ಒಟ್ಟಾಗಿ ಹಝ್‌ರತ್ ಅಹ್ಮದ್‌ರವರಿಗೆ ಕುಫ್ರ್ (ಮತಭ್ರಷ್ಟತೆ) ಫತ್ವವನ್ನು ವಿಧಿಸಿದ್ದರು ಎಂಬ ಚಾರಿತ್ರಿಕ ಸತ್ಯವನ್ನು ಯಾರಿಗೂ ನಿಷೇಧಿಸಲಿಕ್ಕೆ ಸಾಧ್ಯವಿಲ್ಲ. ಮೌಲವಿ ನದೀರ್ ಹುಸೈನ್ ಸಾಹೆಬ್ ದೆಹಲವಿ, ಮೌಲವಿ ಮುಹಮ್ಮದ್ ಹುಸೈನ್ ಸಾಹೆಬ್ ಬಟಾಲವಿ ಮೊದಲಾದವರೊಡನೆ ನಡೆಸಿದ ವಿವಾದಗಳ ಮರ್ಮವಿಷಯ 'ಈಸಾನಬಿಯ ಮರಣ' ಎಂಬುದಾಗಿತ್ತು. ಶಿಲುಬೆಯ ಸಂಭವದ ನಂತರ ಈಸಾನಬಿ ಆಕಾಶಕ್ಕೆ ಎತ್ತಲ್ಪಟ್ಟರೆಂದೂ ಅವರು ಈಗಲೂ ಅಲ್ಲಿ ಬದುಕಿದ್ದಾರೆಂದೂ ಅಂತ್ಯಕಾಲದಲ್ಲಿ ಆಕಾಶದಿಂದ ಇಳಿದುಬರುವರೆಂದೂ ಉಲಮಾಗಳು ಇಷ್ಟುಕಾಲ ಹೇಳುತ್ತಿದ್ದರು. ಈಗ ಅವೆಲ್ಲಾ ಬರೇ ಭೂತಕಾಲ ಸ್ಮರಣೆಗಳಂತೆ ಅವಶೇಷಗೊಳ್ಳುವುವು.

ಈಸಾನಬಿ (ಅ) ಮೃತಪಟ್ಟಿರುವರೆಂದು ಪವಿತ್ರ ಖುರ್‌ಆನಿನ ಮುವ್ವತ್ತರಷ್ಟು ವಚನಗಳನ್ನು ಉದ್ಧರಿಸಿ ಹಝ್‌ರತ್ ಅಹ್ಮದ್ (ಅ) ರವರು ತನ್ನ ವಿಶ್ವಾಸಕ್ಕೆ ಪುರಾವೆಗಳನ್ನು ನೀಡಿರುವರು. ಮಾತ್ರವಲ್ಲ, ಹದೀಸು (ಪೈಗಂಬರರ ನುಡಿ)ಗಳಿಂದಲೂ ಇತರ ಅನೇಕ ವಿವೇಕಯುತವಾದ ನ್ಯಾಯೀಕರಣದಿಂದಲೂ ಆ ಮಹಾತ್ಮರು ಈ ವಿಶ್ವಾಸವನ್ನು ದೃಢಪಡಿಸಿರುವರು. "ಇನ್ನ ಈಸಬ್ನುಮರ್‌ಯಮ ಆಶ ಮಿಯತನ್ ವ ಇಶ್‌ರೀನ ಸನತನ್'' (ಖಂಡಿತವಾಗಿಯೂ ಈಸಬ್ನುಮರ್‌ಯಂ 120 ವರ್ಷಗಳು ಜೀವಿಸಿದ್ದರು) ಎಂಬ 'ಕನ್‌ಸುಲ್ ಉಮ್ಮಾಲ್'ನ ಹದೀಸನ್ನು ಸಹ ಆ ಮಹಾತ್ಮರು ಉದ್ಧರಿಸಿದ್ದರು. 'ಅಲ್ ಜಮಿಯ್ಯತ್'ನ ಲೇಖನದಲ್ಲಿ ಈಸಾನಬಿಯ ಪ್ರಾಯ 130 ಎಂದು ಈಗ ಪ್ರಸ್ತಾವಿಸಲ್ಪಟ್ಟದ್ದು ಖಂಡಿತವಾಗಿಯೂ ಈ ಹದೀಸು ಮತ್ತು ನಿರಾಕರಿಸಲು ಸಾಧ್ಯವಿಲ್ಲದ ಇತರ ಹದೀಸುಗಳನ್ನು ಮುಂದೆ ಇರಿಸಿಕೊಂಡು ನಿಷ್ಪಕ್ಷವಾಗಿ

ಚಿಂತಿಸಿದುದರ ಫಲವಾಗಿ ಯಥಾರ್ಥವು ಬೋಧ್ಯವಾದುದರಿಂದಾಗಿರಬಹುದು. ಹೇಗಿದ್ದರೂ ಈಸಾನಬಿ (ಅ) ಮೃತಪಟ್ಟಿರುವರೆಂಬುದು ಪವಿತ್ರ ಖುರ್‌ಆನ್ ಪ್ರಖ್ಯಾಪಿಸುವ ಒಂದು ಸತ್ಯವೆಂಬ ವಾಸ್ತವಾಂಶವನ್ನು 86 ವರ್ಷಗಳ ದೀರ್ಘ ಅವಧಿಯ ಬಳಿಕವಾದರೂ ಉಲಮಾ ಸಂಘಟನೆಯ ಅಧಿಕೃತ ಪತ್ರವು ಸಮ್ಮತಿಸಿ ಪ್ರಸ್ತಾವಿಸಲು ಧೈರ್ಯಪಟ್ಟದ್ದು ಶುಭಕರವಾದ ಒಂದು ಮಾರ್ಪಾಟಾಗಿದೆ.

ಈ ಕಾಲಘಟ್ಟದಲ್ಲಿ ಆಗಮಿಸಿದ ವಾಗ್ದತ್ತ ಮಸೀಹನ್ನು ಅಂಗೀಕರಿಸುವ ಕಾರ್ಯದಲ್ಲಿ ಮುಸ್ಲಿಂ ಜನಸಮೂಹದ ಮುಂದೆ ನೆಲೆಗೊಂಡಿದ್ದ ಒಂದು ದೊಡ್ಡ ತಡೆ ಈಸಾನಬಿ (ಅ) ಮೃತಪಟ್ಟಿಲ್ಲವೆಂಬ ವಿಶ್ವಾಸವಾಗಿತ್ತು. ಚಿಂತಕರಾದ ಹಲವರು ಈಸಾನಬಿ (ಅ) ಮೃತಪಟ್ಟಿರುವರೆಂದು ಘೋಷಿಸಿದ್ದರೂ ಸಹ ಅದು ಸರ್ವಸಾಮಾನ್ಯವಾಗಿ ಅಂಗೀಕರಿಸಲ್ಪಡಲಿಲ್ಲ. ಇನ್ನು ಕೆಲವರು ಈಸಾನಬಿ (ಅ.) ಮೃತಪಡಲಿ ಅಥವಾ ಮೃತ ಪಡದಿರಲಿ ಎಂಬ ಮೊಂಡು ನ್ಯಾಯವನ್ನು ವಾದಿಸುತ್ತಿದ್ದರು. ಇಂದು ನಿಜಾಂಶವನ್ನು ಅಂಗೀಕರಿಸಲು ನಿರ್ಬಂಧಿತರಾದ ಉಲಮಾಗಳು ತಮ್ಮ ಬದಲಾದ ವಿಶ್ವಾಸವನ್ನು ಪ್ರಕಟಪಡಿಸುವರೆ ಒಂದು ಅನುಕೂಲ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ.

ಸಂಕ್ಷಿಪ್ತವಾಗಿ, ಈಸಾನಬಿಯನ್ನು ನಿರೀಕ್ಷಿಸುತ್ತಿರುವವರು, ಕ್ರೈಸ್ತರಾಗಲಿ ಯಾ ಮುಸ್ಲಿಮರಾಗಲಿ ಆ ವಿಶ್ವಾಸವನ್ನು ತ್ಯಜಿಸುವರೆಂದೂ ಕಡೆಗೆ ಅಹ್ಮದಿಯಾ ವಿಶ್ವಾಸವೇ ಸರಿಯಾದುದೆಂದು ಅವರೆಲ್ಲರೂ ಅಂಗೀಕರಿಸುವ ಕಾಲವು ಬರಲಿದೆಯೆಂದೂ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ನುಡಿದ ಭವಿಷ್ಯವಾಣಿಯು ನೆರವೇರುವ ಕಾಲವು ಸನ್ನಿಹಿತವಾಗಿದೆ.

ಅಹ್ಮದಿಯಾ ವಾರ್ತೆಗಳು

# ಅಖಿಲ ಕೇರಳ ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಇದುವರೆಗೆ ನಡೆದ ಕೇರಳ ರಾಜ್ಯ ಅಹ್ಮದಿಯಾ ಸಮ್ಮೇಳನಗಳಲ್ಲಿ ಅತ್ಯುಜ್ವಲವೆಂದು ವಿಶೇಷಿಸಲ್ಪಡಬಹುದಾದ 19ನೆಯ ಕೇರಳ ಅಹ್ಮದಿಯಾ ಮುಸ್ಲಿಂ ಸಮ್ಮೇಳನವು ಮಲಪ್ಪುರಂ ಜಿಲ್ಲೆಯ ವಾಣಿಯಂಬಲಂ ಎಂಬಲ್ಲಿ ಏಪ್ರಿಲ್ 10 ಮತ್ತು 11ರಲ್ಲು ಜರಗಿತು. ವಿವಿಧ ಕಾರ್ಯಕ್ರಮಗಳೊಂದಿಗೆ ವಿಜಯಕರವಾಗಿ ನಡೆದ ಈ ಸಮ್ಮೇಳನವು ಅಹ್ಮದಿಯಾ ಸಂಘಟನೆ ವಿಜಯದಿಂದ ವಿಜಯಕ್ಕೆ ಮುನ್ನೇರಲು ನಿಶ್ಚಯಿಸಿದ ಒಂದು ದೈವಿಕ ಸಂಘಟನೆಯೆಂದು ತೋರಿಸಿಕೊಟ್ಟಿತು.

**ಪ್ರಾರಂಭ ಸಮ್ಮೇಳನ:**—ಏಪ್ರಿಲ್ 10ರಂದು ಸಾಯಂಕಾಲ 5 ಗಂಟೆಗೆ ಸಮ್ಮೇಳನಕ್ಕಾಗಿ ಸಜ್ಜೀಕರಿಸಿದ 'ಮಸೀಹ್ ನಗರ'ದಲ್ಲಿ ಕೇರಳ ಅಹ್ಮದಿಯಾ ಕೇಂದ್ರ ಸಮಿತಿಯ ಅಧ್ಯಕ್ಷ ಜನಾಬ್ ಎಸ್. ಅಮೀರಲಿ ಸಾಹಿಬ್ ಅವರು ಅಹ್ಮದಿಯಾ ಪತಾಕೆಯನ್ನು ಏರಿಸುವುದರೊಂದಿಗೆ ಕಾರ್ಯಕ್ರಮಗಳ ಪ್ರಾರಂಭವಾಯಿತು. ಹೈದರಾಬಾದ್ ಉಸ್ಮಾನಿಯಾ ಯುನಿವರ್ಸಿಟಿಯ ಖಗೋಳಶಾಸ್ತ್ರಜ್ಞ ಡಾ. ಹಾಫಿಝ್ ಸಾಲಿಹ್ ಮುಹಮ್ಮದ್ ಅಲಾವುದ್ದೀನ್ MSc. PhD ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಮಹಾರಾಷ್ಟ್ರದ ಅಹ್ಮದಿಯಾ ಮಿಶನರಿ ಅಲ್‌ಹಾಜ್ ಮೌಲಾನಾ ಶರೀಫ್ ಅಹ್ಮದ್ ಅಮೀನಿ ಅಧ್ಯಕ್ಷತೆ ವಹಿಸಿದರು. ಮೌಲವಿ ಅಬುಲ್ ವಫಾ, ಮೌಲವಿ ಮುಹಮ್ಮದ್ ಯೂಸುಫ್, ಮುಹಮ್ಮದ್ ಕರೀಮುಲ್ಲಾ ನೌಜವಾನ್ ಮೊದಲಾದವರು ಭಾಷಣ ಮಾಡಿದರು.

**ತರ್‌ಬಿಯತ್ ಸಮಾರಂಭ:**— ಎರಡನೆಯ ದಿವಸ ಪೂರ್ವಾಹ್ನ ಜನಾಬ್ ಸಿ. ಕೆ. ಅಲವಿ ಸಾಹಿಬ್ ಅವರ ವಸತಿಯಲ್ಲಿ ಸೇರಿದ ತರ್‌ಬಿಯತ್ ಸಭೆಯಲ್ಲಿ ಮೌಲಾನಾ ಅಮೀನಿ ಮತ್ತು ಡಾ. ಹಾಫಿಝ್ ಸಾಹಿಬ್

ಅವರು ಉಪದೇಶ ಭಾಷಣಗಳನ್ನು ಮಾಡಿದರು. ನಂತರ ಏರ್ಪಡಿಸಲಾದ ಖುರಾನ್ ಪಠನೆ, ಪದ್ಯ, ಭಾಷಣ ಮೊದಲಾದ ವಿಷಯಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಅನೇಕ ಅಹ್ಮದೀಯ ಯುವಕರೂ ಬಾಲಕರೂ ಭಾಗವಹಿಸಿದರು.

**ಸಮಾರೋಪ ಸಮ್ಮೇಳನ:** ಜನಾಬ್ ಟಿ. ಕೆ. ಮುಹಮ್ಮದ್ ಸಾಹಿಬ್ ಅವರ ಖುರ್‌ಆನ್ ಪಠನೆಯೊಂದಿಗೆ ಆರಂಭವಾದ ಸಮಾರೋಪ ಸಮ್ಮೇಳನದಲ್ಲಿ ಮೌಲವಿ ಅಬುಲ್‌ವಫಾ ಸಾಹಿಬ್ ಅಧ್ಯಕ್ಷತೆ ವಹಿಸಿದರು. ಕೇಂದ್ರಿಯ ಅಹ್ಮದಿಯಾ ತಹ್‌ರೀಕ್ ಜದೀದ್ ವಿಭಾಗದ ಮುಖ್ಯಸ್ತರಾದ ಜನಾಬ್ ಮಲಿಕ್ ಸಲಾವುದ್ದೀನ್ ಸಾಹಿಬ್ M. A., ಮೌಲವಿ ಮುಹಮ್ಮದ್ ಉಮರ್ (ಮದ್ರಾಸ್), ಡಾ. ತಾರೀಕ್ ಅಹ್ಮದ್ (ಒರಿಸ್ಸಾ), ಮೌಲನಾ ಅಮೀನಿ (ಮುಂಬಯಿ), ವಿ. ಅಹ್ಮದ್ ಕುಟ್ಟಿ ಬಿ.ಎ. ಎಲ್.ಎಲ್.ಬಿ., ಬಿ. ಮುಹಮ್ಮದ್‌ಸಾಹಿಬ್‌ಮೊದಲಾದವರು ಭಾಷಣಮಾಡಿದರು. ಎ.ಕ್ಯೂ. ಮುಸ್ಲಿಂ ಸಾಹಿಬ್ ಧನ್ಯವಾದ ಸಮರ್ಪಿಸಿದರು.

---

## ಪಯ್ಯಂಗಾಡಿಯಲ್ಲಿ ಅಹ್ಮದಿಯಾ ಮಸೀದಿ ಉದ್ಘಾಟನೆ

ಕೇರಳ ರಾಜ್ಯದ ಕಣ್ಣಾನ್ನೂರಿಗೆ ಸಮೀಪ ಪಯ್ಯಂಗಾಡಿ ಎಂಬಲ್ಲಿ ಅಲ್ಲಿನ ಸ್ಥಳೀಯ ಅಹ್ಮದಿಯಾ ಸಂಘದವರಿಂದ ನಿರ್ಮಿಸಲ್ಪಟ್ಟ "ಮಸ್ಜಿದ್ ಅಹ್ಮದಿಯಾ"ವನ್ನು ಮಹಾರಾಷ್ಟ್ರದ ಅಹ್ಮದಿಯಾ ಮಿಶನರಿ ಅಲ್‌ಹಾಜ್ ಮೌಲಾನಾ ಅಮೀನಿಯವರು ಎಪ್ರಿಲ್ 16ನೇ ಶುಕ್ರವಾರ ಉದ್ಘಾಟಿಸಿದರು. ಭವ್ಯವೂ ಸುಂದರವೂ ಆದ ಎರಡಂತಸ್ಥಿನ ಈ ಮಸೀದಿ ಕಟ್ಟಡಕ್ಕೆ ಎರಡು ಲಕ್ಷ ರೂಪಾಯಿಗಳಷ್ಟು ಖರ್ಚಾಗಿರುವುದೆಂದೂ ಅವೆಲ್ಲವೂ ಸ್ಥಳೀಯ ಅಹ್ಮದಿಯಾ ಸದಸ್ಯರಿಂದಲೇ ವಹಿಸಲ್ಪಟ್ಟಿತೆಂದೂ ಪ್ರೆಸಿಡೆಂಟ್ ಜನಾಬ್ ಇಬ್ರಾಹಿಂ ಸಾಹಿಬ್ ಅವರು ನೆರೆದ ಸಭೆಯನ್ನು ಸ್ವಾಗತಿಸುತ್ತಾ ಹೇಳಿದರು. ನಂತರ ಶುಕ್ರವಾರದ ಜುಮಾ ಖುತ್‌ಬಾವನ್ನು ಉದ್ಘಾಟಕರು ನಿರ್ವಹಿಸುತ್ತಾ ಮಸೀದಿಯ ಪ್ರಾಮುಖ್ಯತೆಯನ್ನು ವಿವರಿಸಿದರು. ಮಸೀದಿಯು ಮುಸ್ಲಿಮರ ನಾನಾ ವಿಧವಾದ ಪುರೋಗತಿಯ ಪ್ರಾಮುಖ್ಯ ಕೇಂದ್ರವೆಂದೂ ಅದು ಸತ್ಯ ವಿಶ್ವಾಸದ ಸಂರಕ್ಷಣಾ ದುರ್ಗವೆಂದೂ ಅವರು ಹೇಳಿದರು. ಅಹ್ಮದಿಯಾ ಜಮಾಅತಿನ ಅಭಿವೃದ್ಧಿಗನುಸಾರವಾಗಿ ನಾನಾ ಭಾಗಗಳಲ್ಲಿ ಮಸೀದಿಗಳೂ ಮಿಶನ್ ಕೇಂದ್ರಗಳೂ ನಿರ್ಮಾಣವಾಗುತ್ತಿವೆ. ಈ ದೈವಿಕ ಸಂಘಟನೆಯನ್ನು ಸದೆಬಡಿಯಲಿಕ್ಕೂ ನಾಶಪಡಿಸಲಿಕ್ಕೂ ಯಾರಿಂದಲೂ ಸಾಧ್ಯವಿಲ್ಲವೆಂಬುದಕ್ಕೆ ಇದೊಂದು ದೃಷ್ಟಾಂತವೆಂದೂ ಅವರು ಹೇಳಿದರು.

ನಂತರ ಸಾಯಂಕಾಲ ಮಸೀದಿಯ ವಠಾರದಲ್ಲೇ ಸಾರ್ವಜನಿಕ ಸಭೆಯೂ ಜರಗಿತು.

---

## ಮಂಜೇಶ್ವರದಲ್ಲಿ ಅಹ್ಮದಿಯಾ ಮತಪ್ರಸಂಗ

ಕಳೆದ ಎಪ್ರಿಲ್ 24, 25 ಮತ್ತು 26 ತಾರೀಕುಗಳಲ್ಲಿ ಮಂಜೇಶ್ವರ ಅಹ್ಮದಿಯಾ ಮುಸ್ಲಿಂ ಸಂಘದವರ ವತಿಯಿಂದ ಪ್ರಚರಣ ಭಾಷಣಗಳನ್ನು ಏರ್ಪಡಿಸಲಾಯಿತು. 24ನೇ ಶುಕ್ರವಾರ ರಾತ್ರಿ 8-30ಕ್ಕೆ ಸರಿಯಾಗಿ ಸ್ಥಳೀಯ ಅಹ್ಮದಿಯಾ ಸಂಘದ ಪ್ರೆಸಿಡೆಂಟ್ ಜನಾಬ್ ಎಂ. ಅಬ್ದುಲ್ ರಶೀದ್ ಸಾಹಿಬ್ ಅವರ ನಿವಾಸದ ವಠಾರದಲ್ಲೇ ಕಾರ್ಯಕ್ರಮವನ್ನು ಏರ್ಪಡಿಸಲಾಗಿ, ಮೌಲವಿ ಮುಹಮ್ಮದ್ ಯೂಸುಫ್ ಸಾಹಿಬ್ ಅವರು ಸುದೀರ್ಘವಾದ ಭಾಷಣ ನಡೆಸಿದರು.

25 ಮತ್ತು 26ನೇ ದಿನಾಂಕಗಳಲ್ಲಿ ಮಂಜೇಶ್ವರ ರೈಲ್ವೇ ಸ್ಟೇಶನಿನ ಸಮೀಪ ಸಭೆಯು ಜರಗಿತು. ಸಾಯಂಕಾಲ 5 ಗಂಟೆಗೆ ಆರಂಭಗೊಂಡ ಎರಡು ದಿವಸಗಳ ಪ್ರಚರಣ ಸಭೆಗಳಲ್ಲೂ ಜನಾಬ್ ಎಸ್. ಅಮೀರಲಿ ಸಾಹೆಬ್ ಅಧ್ಯಕ್ಷತೆ ವಹಿಸಿದರು. ಮೌಲವಿ ಅಬುಲ್ ವಫಾ ಸಾಹಿಬ್, ಮೌಲವಿ ಮುಹಮ್ಮದ್ ಯೂಸುಫ್ ಸಾಹಿಬ್ ಮತ್ತು ಮೌಲವಿ ಯು. ಅಬೂಬಕ್ಕರ್ ಸಾಹಿಬ್ ಎಂಬಿವರು "ಅಹ್ಮದಿಯಾ ಸಂಘಟನೆ" "ಈಸಾ ನಬಿ (ಅ)ರ ಮರಣ", "ಇಸ್ಲಾಮಿನಲ್ಲಿ ಪ್ರವಾದಿತ್ವ", "ಇಮಾಂ ಮಹದಿಯ ಸತ್ಯತೆಗೆ ದೃಷ್ಟಾಂತಗಳು" ಎಂಬೀ ವಿಷಯಗಳ ಕುರಿತು ಸುದೀರ್ಘವಾಗಿ ಭಾಷಣ ಗೈದರು. ಎರಡು ದಿವಸಗಳಲ್ಲೂ ಧಾರಾಳವಾಗಿ ಸತ್ಯಾನ್ವೇಷಿಗಳು ಭಾಷಣಗಳನ್ನು ಕೇಳಲು ನೆರೆದಿದ್ದರು. ಸಭೆಯು ನಡೆಯುತ್ತಿರುವಾಗಲೇ ಕೆಲವು ಕುಬುದ್ಧಿಗಳು ಕೇಕೇ ಹಾಕುತ್ತಾ ಮತ್ತು ಮರೆಯಿಂದ ಕಲ್ಲೆಸೆಯುತ್ತಾ ಕಾರ್ಯಕ್ರಮಗಳಿಗೆ ವಿಘ್ನವನ್ನು ತಂದೊಡ್ಡಲು ಪ್ರಯತ್ನಿಸಿದರಾದರೂ ಸ್ಥಳೀಯ ಪೋಲೀಸ್ ಅಧಿಕೃತರ ಸಹಾಯದಿಂದಲೂ ಊರ ಮಹನೀಯರ ಸಹಕಾರದಿಂದಲೂ ಕಾರ್ಯಕ್ರಮಗಳು ನಿರ್ವಿಘ್ನವಾಗಿ ಮುಂದುವರಿಯಿತು.

(M. P. I.)

**ಪುಸ್ತಕ ವಿಭಾಗ**

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: **ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.**

ಭಾಷಾಂತರಕಾರ: **ಅಬೂ ತಾಹಿರ್.**

## ಅಧ್ಯಾಯ—6

## ಆಧುನಿಕ ವೈದ್ಯಕೀಯ ಅಭಿಪ್ರಾಯಗಳು

ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೂರ್ಛಿತರಾಗಿ ಕೊನೆಗೆ ಎಚ್ಚರಗೊಂಡರೆಂಬ ವಾದವು ಹೊಸದಲ್ಲ. ಇದು ಹಳೆಯದಾಗಿದೆ. 1928ರಲ್ಲಿ ರಿವ್ಯೂ ಆಫ್ ರಿಲೀಜಿಯನ್ಸ್ ಎಂಬ ಇಂಗ್ಲಿಷ್ ಮಾಸಿಕದ ಸಂಪಾದಕರಾದ ಮೌಲವಿ ಎ. ಆರ್. ದರ್ದ್ ಸಾಹೇಬರು ಬರಹ ಮೂಲಕ ಈ ವಾದದ ಕುರಿತು ಕ್ರೈಸ್ತ ಧರ್ಮ ಪ್ರಚಾರಕರೊಡನೆಯೂ ಪುರೋಹಿತರೊಡನೆಯೂ ಪ್ರಾಧ್ಯಾಪಕರೊಡನೆಯೂ ವಿಚಾರಿಸಿದಾಗ ಇವರಲ್ಲಿ ಕ್ರೈಸ್ತ ಧರ್ಮ ಪ್ರಚಾರಕರು "ಮೂರ್ಛಾ ವಾದವು" ತಳ್ಳಲ್ಪಟ್ಟಿದೆಯೆಂದು ಹೇಳಿದರು. ಇತರರು ಇದರ ಕುರಿತು ತಮ್ಮ ಅಜ್ಞಾನವನ್ನು ವ್ಯಕ್ತಗೊಳಿಸಿದರು. ಸಂಪಾದಕರು ಇವರ ಉತ್ತರಗಳನ್ನು ಬಹಿರಂಗ ಗೊಳಿಸುತ್ತಾ ಈ ರೀತಿ ಬರೆದರು:—

"ಈ ಉತ್ತರಗಳಿಂದ ಮೂರ್ಛಾವಾದವು ಪೂರ್ಣವಾಗಿ ತಳ್ಳಲ್ಪಟ್ಟಿಲ್ಲವೆಂದು ತಿಳಿಯುತ್ತದೆ. ಈಗಿನ ಕಾಲದಲ್ಲಿ ಆ ವಾದವು ಹೆಚ್ಚು ಹೆಚ್ಚಾಗಿ ಸ್ವೀಕೃತವಾಗುತ್ತಿದೆ ಎಂದು ಅವರು ಸಮ್ಮತಿಸುತ್ತಾರೆ. ಬರ್ಮಿಂಗ್ ಹ್ಯಾಮಿನ ಬಿಷಪರು ಎಲ್ಲಾ ನಿಪುಣ ವಿಮರ್ಶಕರು ಈ ವಾದವನ್ನು ತೊರೆದಿರುವರೋ ಎಂಬುದರ ಕುರಿತು ಸಂಶಯ ವ್ಯಕ್ತಗೊಳಿಸುತ್ತಾರೆ. ಒಬ್ಬ ವಿದ್ವಾಂಸರಾದ ಕೆನನ್ ಸ್ಟ್ರೀಟರ್ (Canon Streeter), ಈ ವಾದವು ದಿ ಬ್ರೂಕ್ ಕೆರಿತ್ (The Brook Kerith) ಎಂಬ ಪುಸ್ತಕದಲ್ಲಿ ಪುನರ್‌ವ್ಯಕ್ತವಾಗಿವೆ ಎಂದು ಹೇಳುತ್ತಾರೆ. ಚರ್ಚ್ ಆಫ್ ಇಂಗ್ಲೆಂಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾದ ಡರ್ ಹೇಮ್‌ನ ಬಿಷಪರು ಈ ರೀತಿ ಹೇಳಲು ಅಂಜುವುದಿಲ್ಲ: "ಕ್ರಿಸ್ತರ ಪುನರುತ್ಥಾನದ ಕುರಿತು ಮೂರ್ಛಾ ವಾದವು ತೊರೆಯಲಾಗಿದೆ ಎಂದು ಹೇಳುವುದು ಸರಿಯಲ್ಲ. ಒಂದೆರಡು ವಾರಗಳ ಮೊದಲು ಪ್ರಕಾಶಿತವಾದ ಪಾಗನಿಸಮ್ ಇನ್ ಅವರ್ ಕ್ರಿಶ್ಚಿಯಾನಿಟಿ (Paganism in our Christianity - by A. Weigall) ಎಂಬ ಪುಸ್ತಕದಲ್ಲಿ ಈ ವಾದವನ್ನು ಪುನಃ ಮಂಡಿಸಲಾಗಿದೆ."

ಈ ವಾದದ ಸಮರ್ಥಕರಾದ ಪೌಲಸ್ (Paulus), ವೆಂಟುರಿನಿ (Venturini), ಬರ್ಡಟ್ (Bahrdut) ಶ್ಕೈಲೈರ್‌ಮಾಚರ್ (Schleiermacher)ರನ್ನು ಬದಿಗಿರಿಸಿ ನಾನು ಇತ್ತೀಚೆಗೆ ಯುರೋಪಿನಲ್ಲಿ ಪ್ರಕಟವಾದ ಎರಡು ಪ್ರಸಿದ್ಧೀಕರಣಗಳನ್ನು ಹೆಸರಿಸುತ್ತೇನೆ:—

1. Dog Jesus pa Korest? (ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿರುವರೋ?) ಸ್ಟಾಕ್‌ಹೋಮಿನಲ್ಲಿ ಪ್ರಕಟಿತವಾದ ಪುಸ್ತಕ.

ಲೇಖಕ: Dr. Hugo Toll

2. De Proces de Jesus (ಯೇಸು ಕ್ರಿಸ್ತರ ಸಂಭವ) ಪ್ಯಾರಿಸ್‌ನಲ್ಲಿ ಪ್ರಕಟಿತವಾದುದು.

ಲೇಖಕ: M. Paul Roue

ಮೇಲಿನ ಪ್ರಥಮ ಪುಸ್ತಕವನ್ನು ಬರೆದ ಡಾಕ್ಟರ್ ಹ್ಯೂಗೋ ಟೋಲ್ 1897ರಿಂದ 1923ರ ವರೆಗೆ ಸ್ಟಾಕ್‌ಹೋಮ್ ಆಸ್ಪತ್ರೆಯ ಅಧಿಕಾರಿಯಾಗಿದ್ದರು. ಅವರು ತನ್ನ ಪುಸ್ತಕದಲ್ಲಿ ಬರೆದುದರ ಭಾಷಾಂತರವನ್ನು ಇಂಗ್ಲಿಷಿನಲ್ಲಿ ರಿವ್ಯೂ ಆಫ್ ರಿಲೀಜಿಯನ್ಸ್ ಪತ್ರಿಕೆಯ ಸಂಪಾದಕರು ತನ್ನ ಪತ್ರಿಕೆಯಲ್ಲಿ ಈ ರೀತಿ ಪ್ರಕಟಿಸಿರುವರು:

"ಯೇಸುಕ್ರಿಸ್ತರಿಗಿಂತ ಎಷ್ಟೋ ವರ್ಷ ಮೊದಲು ಶಿಲುಬೆಗೆ ಕೊಡುವ ಶಿಕ್ಷೆ ಜ್ಯಾರಿಯಲ್ಲಿದ್ದಿತು. ರೋಮನರು ಹೆಚ್ಚಾಗಿ ಈ ವಿಧಾನವನ್ನು ಅನುಸರಿಸುತ್ತಿದ್ದರು. ಅವರು ತಮ್ಮ ಅಪರಾಧಿಗಳನ್ನು ಕೂಡಲೇ ಕೊಲ್ಲುತ್ತಿರಲಿಲ್ಲ. ಶಿಲುಬೆಗೆ ಕೊಡುವುದರ ಮೂಲಕ ನಿಧಾನವಾದ ಚಿತ್ರಹಿಂಸೆಯು ಮರಣವು ಉಂಟಾಗುತ್ತಿತ್ತು. ಅದು ನೋಡುವವರಿಗೆ ಪ್ರಿಯವಾದ ಸಂತೋಷಜನಕ ಕೃತ್ಯವೂ ಆಗಿದ್ದಿತು. ಅದಕ್ಕೆ ಯಾವುದೇ ನಿಶ್ಚಿತ ಕ್ರಿಯಾವಿಧಿ ಇರಲಿಲ್ಲ. ಆದುದರಿಂದ ಕಟುಕರು ತಮಗೆ ಒಪ್ಪಿಸಲ್ಪಟ್ಟವರನ್ನು ಇಚ್ಛಾನುಸಾರ ಹಿಂಸಿಸಬಹುದಾಗಿತ್ತು. ಕೆಲವು ಸಾರಿ ಅಪರಾಧಿಗಳನ್ನೇ ಶಿಲುಬೆಗೆ ಹಗ್ಗಗಳಲ್ಲಿ ಕಟ್ಟಲಾಗುತ್ತಿತ್ತು. ಕೆಲವು ಸಾರಿ ಕೈಗಳನ್ನು ಮಾತ್ರ ಶಿಲುಬೆಗೆ ಕಟ್ಟಲಾಗುತ್ತಿತ್ತು. ಅಪರಾಧಿ ಶಾರೀರಿಕವಾಗಿಯೂ ಮಾನಸಿಕವಾಗಿಯೂ ಯಾತನೆ ಅನುಭವಿಸಬೇಕಾಗುತ್ತಿತ್ತು. ಎಲ್ಲದಕ್ಕಿಂತ ಕೆಟ್ಟದು ಅಪಕೀರ್ತಿಯಾಗಿದ್ದಿತು. ಅವರು ಗುಲಾಮರನ್ನೂ ಬಹಳ ಕೆಳತರಗತಿಯವರನ್ನೂ ಕ್ರೂರ ಕಾರ್ಯಗಳನ್ನು ಮಾಡಿದವರನ್ನೂ, ವಂಚಕರನ್ನೂ, ಚಳುವಳಿಗಾರರನ್ನೂ ಶಿಲುಬೆಗೆ ಕೊಡುತ್ತಿದ್ದರು.

"ಯೇಸು ಕ್ರಿಸ್ತರನ್ನು ಶಿಲುಬೆಗೆ ಪ್ರಾಯಶ: ಬತ್ತಲೆಯಾಗಿ ಕೊಡಲಾಯಿತು. ಅದು ಚಳಿಗಾಲವಾಗಿತ್ತು (ಯೋಹಾನ 18 : 18). ಶಿಲುಬೆಗೆ ಕೊಡುವ ಅವರಿಗೆ ಏನನ್ನೋ ಕುಡಿಯಲು ಕೊಟ್ಟರು. ಅದೇನೆಂದು ನಮಗೆ ತಿಳಿಯದು. ದ್ರಾಕ್ಷಾರಸಕ್ಕೆ ಕಹಿಯಾದ ವಸ್ತುವನ್ನು ಬೆರಸಿ ಅಥವಾ ದ್ರಾಕ್ಷಾರಸಕ್ಕೆ ಹುಳಿಯನ್ನು ಬೆರಸಿ ಕೊಡಲಾಯಿತು. ಅದರ ರುಚಿ ನೋಡಿದಾಗ ಅದನ್ನು ಕುಡಿಯಲು ಅವರು ಸಮ್ಮತಿಸಲಿಲ್ಲ (ಮತ್ತಾಯ 27:34). ಗಂಟಲು ಸಂಕಟದಿಂದ ಸಂಕುಚಿತಗೊಂಡಾಗ ನುಂಗಲು ಕಷ್ಟವಾಗುತ್ತದೆ. ಮಾನಸಿಕವಾಗಿ ಅಥವಾ ಶಾರೀರಿಕವಾಗಿ ಸಂಕಟಪಡುವವರು ಹೆಚ್ಚಾಗಿ ನೀರಿಗಾಗಿ ಅಪೇಕ್ಷಿಸಿದರೂ ಕುಡಿಯಲು ಸಮರ್ಥರಾಗುವುದಿಲ್ಲ. ಇದು ಕ್ಷಣಿಕವಾದ ನೋವಿಲ್ಲದ ಅವಸ್ಥೆಯನ್ನು ಸೂಚಿಸುತ್ತದೆ. ಮತ್ತಾಯ (27 : 50) ಪ್ರಕಾರ ಯೇಸು ಕ್ರಿಸ್ತರು "ದೊಡ್ಡ ಧ್ವನಿಯೊಂದಿಗೆ" ಕೂಗಿ ಪ್ರಾಣ ತೊರೆದರು. (ಇಲ್ಲಿ "ದೊಡ್ಡ ಧ್ವನಿ" ಎಂಬುದನ್ನು ಒತ್ತಿಹೇಳಲಾಗಿದೆ). ಶತಾಧಿಪತಿಯು ಈ ವಿಷಯವನ್ನು ಗಮನಿಸಿದನು. ಸಾಯುವವರು ಸಾಧಾರಣವಾಗಿ ಕೂಗಿ ಮರಣ ಹೊಂದುವುದಿಲ್ಲವೆಂದು ಆತನಿಗೆ ಅನುಭವದಿಂದ ತಿಳಿದಿದ್ದಿತು. ದೊಡ್ಡ ಧ್ವನಿಯೊಂದಿಗೆ ಕೂಗಿದಾಗ ಏಸುಕ್ರಿಸ್ತರಿಗೆ ಸ್ವಲ್ಪ ಶಕ್ತಿ ಬಾಕಿ ಇದ್ದಿರಬೇಕು. ಯೋಹಾನನ ನಿರೂಪಣೆಯಲ್ಲಿ ವಿವರಿಸಲಾದ ಕೆಲವು ಸಂಗತಿಗಳು ವೈದ್ಯರ ಶ್ರದ್ಧೆಯನ್ನು ಸೆಳೆಯುವಂತಿವೆ. ಅವುಗಳು ಯಥಾರ್ಥವಾದ ಸಂಗತಿಗಳಿಂದ ಕೂಡಿದ್ದು ಅಪಘಾತ ಮತ್ತು ಮೂರ್ಛೆಯನ್ನು ಸೂಚಿಸುತ್ತವೆ. ಎಚ್ಚರದಪ್ಪುವಾಗ ಪ್ರಧಾನವಾಗಿ ಶಿರೋಭಾಗದಿಂದ ರಕ್ತವು ಹೋಗಿ ರೋಗಿಯು ಬಿಳುಪೇರಿದಂತವನಾಗುತ್ತಾನೆ. ಆತನನ್ನು ಮಲಗಿಸಿದಾಗ ಆತನಿಗೆ ಗಂಟಲು ಒಣಗಿದಂತಾಗಿ ಆತನು ಅಸ್ಪಷ್ಟವಾಗಿ ಅಥವಾ ಸ್ಪಷ್ಟವಾಗಿ "ನೀರು, ನೀರು" ಎಂದು ಮಾತ್ರ ಕೂಗುವನು. ಎಚ್ಚರದಪ್ಪಿದ ವ್ಯಕ್ತಿ ಮರಣ ಹೊಂದುವುದು ಸಾಧ್ಯವಿದೆ. ಈ ರೀತಿ ಮರಣ ಹೊಂದುವ ವ್ಯಕ್ತಿ ನೀರಿಗಾಗಿ ಕೂಗುತ್ತಾ ಇದ್ದುದು ಸಾಧ್ಯ; ಆದರೆ ಸಾಯುತ್ತಿರುವ ವ್ಯಕ್ತಿ ಸಾಮಾನ್ಯವಾಗಿ ನೀರನ್ನು ಕೇಳುವುದಿಲ್ಲ. ಆತನ ತುಟಿಗಳು ಒಣಗುತ್ತಿರುವುದು ಕಾಣಬಹುದು. ಆತನಿಗೆ ಒಂದು ಚಮಚ ನೀರು ಕುಡಿಸಲು ಪ್ರಯತ್ನಿಸಿದಾಗ ಆತನು ಕುಡಿಯಬಹುದು; ಆತನಿಗೆ ತಿರಸ್ಕರಿಸಲು ಪ್ರಾಯಶಃ ಆಗ ಸಾಧ್ಯವಾಗುವುದಿಲ್ಲ (ಹೆಚ್ಚಾಗಿ ಅಂತಹ ವ್ಯಕ್ತಿಗಳು ತಿರಸ್ಕರಿಸುವುದೂ ಇಲ್ಲ). ಮೂರ್ಛಿತ

ನಾಗುವ ವ್ಯಕ್ತಿ (ಅಸಾಧ್ಯವಾದ ಬಾಯಾರಿಕೆಯಿಂದ) ಎಚ್ಚರದಪ್ಪುತ್ತಾನೆ. ಆತನಿಗೆ ಪ್ರಪಂಚ ತನ್ನ ಕೆಳಗಿಂದ ಮರೆಯಾಗುವಂತೆ ತೋರಿ ತಾನು ಹಾರಾಡುವಂತೆ ತೋರುತ್ತದೆ. ಆತನು ಕೊನೆಯ ಮಾತಾಗಿ ಉಚ್ಚರಿಸುತ್ತಾ “ನಾನು ಸಾಯುತ್ತಿದ್ದೇನೆ” ಎಂದೆನ್ನಬಹುದು. ಆದರೆ ಸಾಯುವ ಮನುಷ್ಯ ರಕ್ತಸ್ರಾವ ಮತ್ತು ಸಂಕಟದಿಂದ ಬಲಹೀನನಾಗಿ ಬರೇ ಬಾಯಿ ತೆರೆದು ಗಾಳಿಯನ್ನು ಹೀರಲು ಉದ್ಯುಕ್ತನಾಗಬಹುದೇ ಹೊರತು “ನಾನು ಸಾಯುತ್ತಿದ್ದೇನೆ” ಎಂಬ ನಾಟಕೀಯ ಮಾತುಗಳನ್ನು ಹೇಳಲು ಸಾಧ್ಯವಿಲ್ಲ. ಆದರೆ ಯೇಸುಕ್ರಿಸ್ತರು, ‘ಎಲ್ಲವೂ ಮುಗಿಯಿತು. ನಾನು ಸಾಯುತ್ತಿದ್ದೇನೆ’ ಎಂದು ಹೇಳಿರುವರು.”

“ಅವರು ತನ್ನ ಶತ್ರುಗಳಿಗಾಗಿ ಪ್ರಾರ್ಥಿಸಿದರು. ಕಳ್ಳರು ಶಿಲುಬೆಗಳಲ್ಲಿ ನೇತಾಡುವುದನ್ನು ನೋಡಿದರು. ತನ್ನ ಮತ್ತು ಎಲ್ಲಾ ಜನರ ಬಿಡುಗಡೆಯ ಕುರಿತು ಅವರು ಆಲೋಚಿಸಿದರು. ಸ್ವಾಭಾವಿಕವಾಗಿಯೂ ಸಾಮಾನ್ಯವಾಗಿಯೂ ತನ್ನ ತಾಯಿಯ ಭವಿಷ್ಯದ ಕುರಿತು ಒಬ್ಬ ಉತ್ತಮ ಪುತ್ರನ ಹಾಗೆ ಆಲೋಚಿಸಿದರು. ತಾನು ಮೆಸ್ಸಾಯನೆಂದೂ ತಾನು ದೇವರ ರಾಜ್ಯವನ್ನು ಸ್ಥಾಪಿಸುವೆನೆಂದೂ ಅವರು ಆಲೋಚಿಸಿದ್ದರು. ತನ್ನ ಬಳಲುವಿಕೆಯಿಂದ ತಾನದನ್ನು ಸ್ಥಾಪಿಸುವೆನೆಂದು ಅವರು ನಂಬಿದ್ದರು. ದಾವೀದರ ಒಂದು ಕೀರ್ತನೆಯನ್ನು ಅವರು ಜ್ಞಾಪಿಸುತ್ತಾರೆ: “ನನ್ನ ದೇವರೇ. ನನ್ನ ದೇವರೇ, ನನ್ನನ್ನು ಏಕೆ ಕೈಬಿಟ್ಟೆ?” ಕೊನೆಗೆ ವೇದನೆ ಮತ್ತು ಎಚ್ಚರದಪ್ಪುವಿಕೆ ಅವರನ್ನು ತನ್ನ ಕುರಿತು ಆಲೋಚಿಸುವಂತೆ ಮಾಡುತ್ತದೆ, “ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸುತ್ತೇನೆ” ಎಂದು ಹೇಳಿ, “ನೀರು, ನಾನು ಸಾಯುತ್ತಿದ್ದೇನೆ” ಎಂದು ಹೇಳುತ್ತಾರೆ. ಯೇಸುಕ್ರಿಸ್ತರು ಹೇಗೆ ಸತ್ತರು? ಬೈಬಲಿನಲ್ಲಿ “ಆತನು ಪ್ರಾಣವನ್ನು ಬಿಟ್ಟನು” ಎಂದಿದೆ. ಇದರಿಂದ ಅವರು ಮರಣ ಹೊಂದಿದರೆಂದು ಅರ್ಥ ಮಾಡಲಾಗಿದೆ. ಶತಾಧಿಪತಿ ಇದೇ ರೀತಿ ಗ್ರಹಿಸಿದನು. ಇಲ್ಲದಿದ್ದರೆ ಅವರ ಎಲುಬುಗಳನ್ನು ಮುರಿಯುತ್ತಿದ್ದನು. ಮನುಷ್ಯರು ಯಾವುದೇ ಕಾರಣವಿಲ್ಲದೆ ಸಾಯಬಹುದು. ಅವರು ಹೆದರಿಕೆ ಮತ್ತು ಆಘಾತದಿಂದಲೂ ಸಾಯಬಹುದು. ಆದರೆ ಶಿಲುಬೆಗೆ ಕೊಟ್ಟ ಕೂಡಲೇ ಯಾರೂ ಸಾಯುತ್ತಿರಲಿಲ್ಲ. ಯೂಸಿಬಿಯಸನು (Eusebius) ಆತನ ಕಾಲದ ರಾಜನಾದ ಡೈಯೋಕ್ಲೀಟಿಯಾನಸ್ (Diocletianus)ನು ಕೊಡುತ್ತಿದ್ದ ಹಿಂಸೆಗಳನ್ನು ನಿರೂಪಿಸುತ್ತಾ ಶಿಲುಬೆಗೆ ಕೊಡಲ್ಪಟ್ಟವರು ಹಲವಾರು ದಿನಗಳ ನಂತರ ಬಲಹೀನತೆಯಿಂದಲೂ, ಹಸಿವೆಯಿಂದಲೂ, ಕ್ರೂರ ಪಕ್ಷಿಗಳ ಅಥವಾ ಹಿಂಸ್ರ ಮೃಗಗಳ ಆಕ್ರಮಣದಿಂದಲೂ ಸಾಯುತ್ತಿದ್ದರೆಂದು ಬರೆಯಲಾಗಿದೆ. ಯೇಸುಕ್ರಿಸ್ತರೊಂದಿಗೆ ಶಿಲುಬೆಗೆ ಕೊಡಲ್ಪಟ್ಟ ಕಳ್ಳರು ಸಂಜೆಯಾದಾಗಲೂ ಜೀವದಿಂದಿದ್ದರು. ಅವರ ಮೂಳೆಗಳನ್ನು ಸೈನಿಕರು ಮುರಿದು ಕೊಂದರು. ಯೋಸೆಫನು ಪಿಲಾತನೊಡನೆ ಯೇಸುಕ್ರಿಸ್ತರು ತೀರಿಹೋದರೆಂದು ಹೇಳಿದಾಗ ಆತನದನ್ನು ನಂಬಲಿಲ್ಲ. ಪಿಲಾತನಿಗೆ ಇದರ ಕುರಿತು ಅನುಭವವಿರುವ ಕಾರಣ ಶತಾಧಿಪತಿಯೊಡನೆ ವಿಚಾರಿಸಿದನು. ಯೇಸುಕ್ರಿಸ್ತರು ಶಕ್ತಿಗುಂದಿದವರಾಗಿಯೂ, ರಕ್ತಸ್ರಾವ ಹೊಂದಿದವರಾಗಿಯೂ ತೀರಿ ಹೋಗಲು ಸಾಧ್ಯವಿದೆ. ಆದರೆ ಅದು ಆ ರೀತಿ ಸಂಭವಿಸಿರುವುದು ಸಂಶಯಾಸ್ಪದ.”

“ಯೇಸುಕ್ರಿಸ್ತರು ಸತ್ತಿದ್ದರೆ ರಕ್ತವು ಬರುತ್ತಿರಲಿಲ್ಲ. ಈ ಸಂಭವವನ್ನು ವಿವರಿಸುವ ಯೊಹಾನನಿಗೆ ಈ ಸಂಭವದ ಮಹತ್ವ ತಿಳಿದಿದ್ದಿತು. ಅದರ ಕುರಿತು ತಿಳಿದವರು ಸಹ ಅನಂತರ ಮಾತಾಡಲು ಧೈರ್ಯಪಡಲಿಲ್ಲ. ಯೇಸುಕ್ರಿಸ್ತರನ್ನು ಬೆಳಗಾತ ಬಾರುಕೋಲುಗಳಿಂದ ಹೊಡೆಯಲಾಯಿತು. ಶರೀರದ ಚರ್ಮವನ್ನು ಬಲವಾದ ಒತ್ತಡಕ್ಕೆ ಗುರಿ ಮಾಡಿದಾಗ ಉಬ್ಬಿದ ಕೆಂಪು ಬರೆಗಳೂ ಬೊಕ್ಕೆಗಳೂ ಏಳುತ್ತವೆ. ಆವಾಗ ಒಂದು ರೀತಿಯ ನೀರಿನಂತಹ ಪದಾರ್ಥ ಮಾಂಸ ಖಂಡಗಳ ಮತ್ತು ಚರ್ಮದ ಮಧ್ಯದಲ್ಲಿ ಉಂಟಾಗಿ ಚಿಕ್ಕ ದೊಡ್ಡ ಬೊಕ್ಕೆಗಳು ಉಂಟಾಗುತ್ತವೆ. ಇವುಗಳನ್ನು ಶಾಸ್ತ್ರೀಯವಾಗಿ ಈ ರೀತಿ ಹೆಸರಿಸಲಾಗಿದೆ: “Epanchments Traumatiques de serosite. De coloment de la peau.” ಒಬ್ಬ ಸೈನಿಕ ಈ ರೀತಿಯ ಬೊಕ್ಕೆಗಳನ್ನು ನೋಡಿದನು. ಅವುಗಳಲ್ಲಿ ಒಂದನ್ನು ತನ್ನ ಈಟಿಯಿಂದ ತಮಾಷೆಗಾಗಿಯೋ ಅಶ್ರದ್ಧೆಯಿಂದಲೋ ಸ್ಪರ್ಶಿಸಿದಾಗ ಯೇಸುಕ್ರಿಸ್ತರು ಗಾಯಗೊಂಡರು. ನೀರು ಮತ್ತು ರಕ್ತ ಸುರಿಯಿತು. ಯೇಸುಕ್ರಿಸ್ತರು ಮೂರ್ಛಿತರಾಗಿದ್ದು ತೋರಿಕೆಗೆ ಮೃತರಂತೆ ಕಾಣುತ್ತಿ

ದ್ದರು. ಆ ಬಡ ಅವಮಾನಕರಾದ ಜನರಿಗೆ ಯೇಸು ಕ್ರಿಸ್ತರು ಸತ್ತಿಲ್ಲವೆಂದು ತಿಳಿದಿರಲಿಲ್ಲ. ಅವರನ್ನು ಒಂದು ತಾತ್ಕಾಲಿಕ ಸಮಾಧಿಯಲ್ಲಿ ''ಅದು ಬಹಳ ಹತ್ತಿರವಿದ್ದ ಕಾರಣ'' ಇರಿಸಲಾಯಿತು. ತೋಟಗಾರನ ಕೊಳಕಾದ ಮತ್ತು ವಿಕಾರವಾದ ಉಡುಗೆಯಲ್ಲಿ ಯೇಸುಕ್ರಿಸ್ತರಿದ್ದಾಗ ಮರಿಯಳು ಅವರನ್ನು ಗುರುತಿಸದಿದ್ದಾಗ, ಅವರು ವಿನೀತರಾಗಿ "ಮರಿಯಾ" ಎಂಬ ಏಕಮಾತ್ರ ಶಬ್ದ ಉಚ್ಚರಿಸುತ್ತಾರೆ. ಇದು ಅವರ ಆಶ್ರಯವಿಹೀನತೆ ಮತ್ತು ಏಕಾಂತತೆಯನ್ನು ತೋರಿಸುತ್ತದೆ. ಅವರನ್ನು ಗುರುತಿಸಿ ಮರಿಯಳು ಅವರ ಕೈಗಳನ್ನು ಚುಂಬಿಸಲು ಯತ್ನಿಸಿದಾಗ: "ನನ್ನನ್ನು ಸ್ಪರ್ಶಿಸಬೇಡ ಎಂದು ಅವರು ಹೇಳುತ್ತಾರೆ. ಅವರ ಗಾಯಗಳು ಶರೀರವಿಡೀ ನೋಯಿಸುತ್ತಿದ್ದುದರಿಂದ ಆಕೆ ಸ್ಪರ್ಶಿಸುವುದನ್ನು ಅವರು ಇಷ್ಟಪಡಲಿಲ್ಲ. "ನಾನು ನನ್ನ ತಂದೆ ಬಳಿಗೆ ಇನ್ನೂ ಹೋಗಿಲ್ಲ'' ಎಂದು ಹೇಳುವಾಗ ಅವರು ಪೌರಾತ್ಯ ಆಡಂಬರದಿಂದ ಕೂಡಿದ ಭಾಷೆಯನ್ನೂ ಬಳಸುತ್ತಾರೆ. ''ನಾನು ಇನ್ನೂ ಸತ್ತಿಲ್ಲ'' ಎಂದು ಅವರ ಉದ್ದೇಶವಾಗಿದೆ. ಅವರು ಧೈರ್ಯಗುಂದಿದವರಾಗಿ ರೋಗಿಯಂತಾಗಿ ಎಷ್ಟು ಬೇಸರದಿಂದಿದ್ದರೆಂದರೆ ತಾನು ಯಾವ ಸಮಯದಲ್ಲಾದರೂ ಸಾಯಬಹುದೆಂದು ಗ್ರಹಿಸಿ ತನ್ನ ಸಹೋದರರಿಗೆ ಅಂತಿಮ ಸಂದೇಶ ಕಳುಹಿಸುತ್ತಾರೆ. ಇದು ಸಂಪೂರ್ಣವಾಗಿ ಸ್ವಾಭಾವಿಕವಾಗಿದೆ. ಅವರು ಆ ಕಾಲದಲ್ಲಿ ಅತ್ಯಂತ ನೀಚವಾಗಿದ್ದ ಶಿಕ್ಷೆಯನ್ನು ಅನುಭವಿಸಿದರು. ಅವರು ಶಿಕ್ಷಿಸಲ್ಪಟ್ಟವರೂ ಬಹಳ ನಿಕೃಷ್ಟರಾಗಿಯೂ ತಿಳಿಯಲ್ಪಟ್ಟರು. ಅಂತಹ ವ್ಯಕ್ತಿ ತನ್ನ ಸಾನ್ನಿಧ್ಯದಿಂದ ಭೂಮಿಯನ್ನು ಭ್ರಷ್ಟಗೊಳಿಸುವನೆಂದು ಆ ಕಾಲದವರು ನಂಬುತ್ತಿದ್ದರು. ಅವರು ತನ್ನ ಇರುವಿಕೆಯನ್ನು ವ್ಯಕ್ತಗೊಳಿಸಿ ವಿರೋಧಿಗಳ ಹಿಡಿತಕ್ಕೆ ಸಿಲುಕುವಂತೆ ಮಾಡಲು ಧೈರ್ಯಪಡಲಿಲ್ಲ. ಅವರು ಎಷ್ಟು ಹೆದರುತ್ತಿದ್ದರೆಂದರೆ ಅವರು ತೋಟದಲ್ಲಿ ಅಡಗಿದ್ದರು. ಎಮ್ಮಾ ನಗರಕ್ಕೆ ಹೋಗುವ ಜನವಿಹೀನವಾದ ರಸ್ತೆಯಲ್ಲಿ ತನ್ನ ಶಿಷ್ಯರನ್ನು ಸ್ವಲ್ಪ ಸಮಯಕ್ಕೆ ಮಾತ್ರ ಕಾಣುತ್ತಾರೆ. ಆ ಶಿಷ್ಯರು ಯಾವುದೇ ಸಹಾಯ ಮಾಡಲು ಹೆದರುತ್ತಾರೆ. ಅವರೊಂದಿಗೆ ನಡೆದರೆ ಗುರುತಿಸಲ್ಪಡುವರೆಂದೂ ಹೆದರುತ್ತಾರೆ. ಅವರು ಪುನರುಜ್ಜೀವನಗೊಳ್ಳಲು ಶಿಷ್ಯರು ಸಹಾಯಿಸಿದ್ದರೆ, ಅವರು ಒಬ್ಬಂಟಿಗರಾಗಿ ಸ್ನೇಹಿತರಿಲ್ಲದೆ ಹಸಿವೆಯಿಂದ ಬಳಲುವಂತಾಗಿ ಹೋಗಲು ಸಮ್ಮತಿಸುತ್ತಿರಲಿಲ್ಲ. ಶಿಷ್ಯರನ್ನು ಒಂದು ಜನವಿಹೀನವಾದ ಸ್ಥಳದಲ್ಲಿ ಭೇಟಿಯಾಗುವಂತೆ ದೂತರ ಮೂಲಕ ಏರ್ಪಡಿಸುತ್ತಾರೆ. ಅವರು ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಂಡು ಕೊನೆಗೆ ಶಿಷ್ಯರನ್ನು ಪೂರ್ಣವಾಗಿ ತೊರೆದು ಹೋಗುತ್ತಾರೆ.''

"ಒಮ್ಮೆ ಮಾತ್ರ (ಮತ್ತಾಯ 28:18ರಲ್ಲಿ ಬರೆದಂತೆ) ಅವರು ಗಂಭೀರವಾಗಿ ಮಾತಾಡುತ್ತಾರೆ: 'ನನಗೆ ಆಕಾಶ ಭೂಮಿಗಳಲ್ಲಿ ಎಲ್ಲಾ ಶಕ್ತಿಗಳು ಕೊಡಲ್ಪಟ್ಟಿವೆ.' ಡಾಕ್ಟರರಾದ ನಮಗೆ ಅದೇನೆಂದು ಗೊತ್ತಿದೆ. ನಾವದನ್ನು ''Dementia Paranoids'' ಎನ್ನುತ್ತೇವೆ.

"ಯೇಸುಕ್ರಿಸ್ತರು ಶಿಲುಬೆಯಿಂದ ರಕ್ಷಿತರಾಗಿ, ಭಾರತಕ್ಕೆ ಬಂದು ಈಸಾ ಎಂಬ ಹೆಸರಿನಲ್ಲಿ ಕಾಶ್ಮೀರದ ಸುಂದರ ಕಣಿವೆಯಲ್ಲಿರುವ ಸಂತೋಷ ನಗರವಾದ ಶ್ರೀನಗರದಲ್ಲಿ ವಾಸಿಸಿದರೆಂದು ಪೌರ್ವಾತ್ಯ ಜಗತ್ತಿನ ಒಂದು ಧಾರ್ಮಿಕ ಸಂಘದವರು ನಂಬುತ್ತಾರೆ. ಅಲ್ಲಿ ಅವರು 120 ವರ್ಷ ವಯಸ್ಸಿನ ವರೆಗೆ ಜೀವಿಸಿದ್ದರೆಂದೂ ಅನಂತರ ಅಲ್ಲೇ ಮೃತರಾದರೆಂದೂ ಅವರ ಸಮಾಧಿ ಅಲ್ಲಿದೆಯೆಂದೂ ಹೇಳಲಾಗುತ್ತಿದೆ. ಅವರ ಹೆಸರು ಅಲ್ಲಿ ಯೂಸ್ ಆಸಫ್ ಎಂದಾಗಿತ್ತೆಂದೂ ಹೇಳುತ್ತಾರೆ. ಈ ಧಾರ್ಮಿಕ ಸಂಘದ ಹೆಸರು ''ಎನ್ ಸೈಕ್ಲೋಪೀಡಿಯಾ ಇಸ್ಲಾಮ್ 1913 B ಪುಟ 218ರ ಪ್ರಕಾರ 'ಅಹ್ಮದಿಯಾ' ಎಂದಾಗಿದೆ.'' *

ಸ್ವೀಡನ್ನಿನ ಅತ್ಯಂತ ಶ್ರೇಷ್ಠ ವೈದ್ಯರು ಬೈಬಲನ್ನು ಪಠಿಸಿ ವ್ಯಕ್ತಗೊಳಿಸಿದ ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ನಮಗೆ ಯೇಸುಕ್ರಿಸ್ತರು ಶಿಲುಬೆಗೆ ಕೊಡಲ್ಪಟ್ಟಾಗ ಮೃತರಾಗಲಿಲ್ಲವೆಂದು ಸ್ಪಷ್ಟವಾಗುತ್ತದೆ. ಯೇಸುಕ್ರಿಸ್ತರು ಶಿಲುಬೆಯಿಂದ ಇಳಿಸಲ್ಪಟ್ಟಾಗ ಯಾವುದಾದರೂ ವೈದ್ಯರಿಂದ ಪರೀಕ್ಷೆಗೊಳಗಾಗಿದ್ದರೆ ಈ ರೀತಿಯ ಅಭಿಪ್ರಾಯವನ್ನು ಖಂಡಿತವಾಗಿಯೂ ವ್ಯಕ್ತಗೊಳಿಸುತ್ತಿದ್ದರು.

★

---

* Review of Religions, No. 9 (1928)

# ಯೇಸುಕ್ರಿಸ್ತರು ಸ್ವರ್ಗಾರೋಹಣಗೈದರೋ ?

ಸುವಾರ್ತೆಗಳ ನಾಲ್ವರು ಲೇಖಕರು ಯೇಸುಕ್ರಿಸ್ತರು ತನ್ನ ಸ್ಥೂಲ ಶರೀರದೊಂದಿಗೆ ಶವಕುಟೀರದಿಂದ ಹೊರಬಂದರೆಂದು ಬರೆದಿರುತ್ತಾರೆ. ಶಿಷ್ಯರು ಅವರನ್ನು ಪ್ರೇತವೆಂದು ಸಂಶಯಿಸಿದಾಗ, ಯೇಸುಕ್ರಿಸ್ತರು: ''ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ. ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು, ಅವು ಭೂತಕ್ಕಿಲ್ಲ'' ಎಂದು ಹೇಳಿ ಅನಂತರ "ತಿನ್ನಲು ಏನಾದರೂ ಇದೆಯೋ' ಎಂದು ಕೇಳಿದಾಗ ಶಿಷ್ಯರು ಅವರಿಗೆ ಒಂದು ತುಂಡು ಸುಟ್ಟ ಮೀನನ್ನೂ ಜೇನುಖಂಡ (Honey comb)ವನ್ನೂ ಕೊಟ್ಟರು. ಅವರು ಅದನ್ನು ತೆಗೆದುಕೊಂಡು ಅವರೆದುರಲ್ಲೇ ತಿಂದರು. (ಲೂಕ 24: 39_43). ಅವರು ಪುನರ್ಬಂಧಿತನಾಗುವ ಹೆದರಿಕೆಯಿಂದ ಕೂಡಿದುದರಿಂದ ಶಿಷ್ಯರನ್ನು ರಹಸ್ಯವಾಗಿ ದೂರ ಸ್ಥಳಗಳಲ್ಲಿ ಭೇಟಿಯಾದರು. ಅವರು ಇತರರಿಗೆ ಕಾಣಿಸಿಕೊಳ್ಳಲಿಲ್ಲ. ಸಂತ ಪೇತ್ರನು ಈ ರೀತಿ ಹೇಳಿರುವನು: ''ಆತನು ಎಲ್ಲರಿಗಾಗಿ ಪ್ರತ್ಯಕ್ಷನಾಗದೆ ದೇವರು ಮುಂಚಿತವಾಗಿ ಆರಿಸಿಕೊಂಡಿದ್ದ ಸಾಕ್ಷಿಗಳಾದ ನಮಗೆ ಪ್ರತ್ಯಕ್ಷನಾದನು. ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದ ಮೇಲೆ ನಾವು ಆತನ ಸಂಗಡ ಅನ್ನಪಾನಗಳನ್ನು ತಕ್ಕೊಂಡೆವು'' (ಅಪೋಸ್ತಲರ ಕೃತ್ಯಗಳು 10 : 41)

ಯೇಸುಕ್ರಿಸ್ತರು ಸತ್ತು ಬದುಕಿದ್ದರೆ ಅಥವಾ ಅವರ ಶರೀರ ದಿವ್ಯವಾದ ಸೂಕ್ಷ್ಮ ಶರೀರವಾಗಿ ಪರಿವರ್ತನಗೊಂಡಿದ್ದರೆ ಅವರಿಗೆ ಪುನರ್ಬಂಧಿತನಾಗುವ ಅಥವಾ ಮರಣದ ಹೆದರಿಕೆ ಇರುತ್ತಿರಲಿಲ್ಲ. ಅವರು ತನ್ನ ವಿರೋಧಿಗಳಿಗೆ ಕಾಣಿಸಿಕೊಂಡು ಬಹಿರಂಗ ಸಭೆಗಳಲ್ಲಿ ತಾನು ಮೃತ್ಯುವನ್ನು ಜಯಿಸಿ ಪಾರಾದುದನ್ನು ವಿವರಿಸುತ್ತಿದ್ದರು. ಅವರು ತನ್ನಲ್ಲಿ ವಿಶ್ವಾಸಗೊಳ್ಳುವಂತೆ ವಿರೋಧಿಗಳಿಗೆ ಉಪದೇಶಿಸಿ ಅವರ ಮೇಲೆ ತನಗಿರುವ ಪ್ರೀತಿಯನ್ನು ವ್ಯಕ್ತಗೊಳಿಸುತ್ತಿದ್ದರು. ಅವರು ಈ ರೀತಿ ಮಾಡಲಿಲ್ಲ. ಅವರು ತನ್ನ ರಕ್ಷಣೆಗೆ ಬೇಕಾಗಿ ಎಲ್ಲಾ ಏರ್ಪಾಡು ಕೈಗೊಂಡರು. ಇದು ಏತಕ್ಕಾಗಿ ? ಅವರು ತನ್ನ ಸ್ಥೂಲ ಶರೀರದೊಂದಿಗೆ ಇದ್ದುದರಿಂದಲೇ ಪುನಃ ಸೆರೆಯಾಳಾಗಿ ಮರಣದಂಡನೆಗೆ ಗುರಿಯಾಗುವ ಭಯವು ಅವರನ್ನು ಪೀಡಿಸುತ್ತಿತ್ತು.

ಬೈಬಲಿನ ಹಲವು ವ್ಯಾಖ್ಯಾನಕಾರರು ಲೂಕ 24 : 39ರ ಕುರಿತು ಈ ರೀತಿ ಬರೆದಿರುವರು: "ಈ ವಚನ ಮತ್ತು ಇತರ ವಚನಗಳಿಗೆ ವಿರುದ್ಧವಾಗಿ ಕೇವಲ ಪ್ರೇತರೂಪವಾಗಿ ಯಾವುದೇ ಸಂಕಷ್ಟಕ್ಕೊಳಗಾಗದಂತಹ, ನಿಜವಾದ ಶರೀರ ವಿರಹಿತರಾಗಿ ಯೇಸುಕ್ರಿಸ್ತರು ಪುನಃ ಕಾಣಿಸಿಕೊಂಡರೆಂಬುದು ಪುರಾತನ ಚರ್ಚಿನ ಅನಧಿಕೃತ ವಿಶ್ವಾಸಗಳಲ್ಲೊಂದಾಗಿತ್ತು. ಈ ಪುನರುತ್ಥಾನಗೊಂಡ ಶರೀರವೂ ದೇವರ ಬಲಪಾರ್ಶ್ವದಲ್ಲಿ ಕುಳಿತಿರುವ ನಮ್ಮ ಯಜಮಾನರಾದ ಯೇಸುಕ್ರಿಸ್ತರ ಈಗಿನ ಶರೀರವೂ ಒಂದೇ ಆಗಿದೆ''.

ಯೇಸುಕ್ರಿಸ್ತರು, ತಿನ್ನಲು ಏನಾದರೂ ಇದೆಯೋ?_ಎಂದು ಶಿಷ್ಯರನ್ನು ಕೇಳಿ, ಅವರ ಮುಂಭಾಗದಲ್ಲೇ ತಿಂದರು. ಅವರು ಯೊರೋಸಲೇಮಿನಿಂದ ಗಲಿಲಾಯಕ್ಕಿರುವ ದೂರವನ್ನು ಕಾಲ್ನಡೆಯಿಂದ, ಸರಿಯಾದ ಮಾರ್ಗವನ್ನು ಬಿಟ್ಟು, ದೂರವನ್ನು ಹೆಚ್ಚಾಗಿಸುವ ಬಳಸುದಾರಿಯಿಂದ ಪ್ರಯಾಣಿಸಿದುದು ತನ್ನನ್ನು ಯಾರಾದರೂ ಹಿಂಬಾಲಿಸಿ ಹಿಡಿಯದಿರಲಿ ಎಂಬ ಉದ್ದೇಶದಿಂದಾಗಿದೆ. ಅವರು ನಶ್ವರವಾದ ಶರೀರವನ್ನು ಹೊಂದಿರದಿದ್ದರೆ ಈ ರೀತಿ ಮಾಡುತ್ತಿರಲಿಲ್ಲ.

## ಫಕ್ಕನೆ ಪ್ರತ್ಯಕ್ಷನಾಗುವಿಕೆ

"ಶಿಷ್ಯರು ಯಹೂದ್ಯರ ಭಯದಿಂದ ತಾವು ಇದ್ದ ಮನೆಯ ಬಾಗಿಲುಗಳನ್ನು ಮುಚ್ಚಿಕೊಂಡಿರಲು ಯೇಸು ಬಂದು ನಡುವೆ ನಿಂತನು" (ಯೋಹಾನ 20:19) ಎಂಬ ವಚನ ನೋಡಿರಿ. ಇದು ಸಹ ಯೇಸುಕ್ರಿಸ್ತರು ಪ್ರೇತ ಶರೀರರಾಗಿ ಎದ್ದರೆಂದು ಸ್ಥಾಪಿಸುವುದಿಲ್ಲ. ಬೈಬಲಿನ ವ್ಯಾಖ್ಯಾನಕಾರರು ಲೂಕ 24:39ರ ಕುರಿತು ಈರೀತಿ ಸಹ ಹೇಳಿರುವರು: "ಮಾಂಸ ಮತ್ತು ಎಲುಬಿನಿಂದ ಕೂಡಿದ ಶರೀರ ಬಾಗಿಲು ಮುಚ್ಚಿದ ಕೋಣೆಯೊಳಗೆ ಹೇಗೆ ಪ್ರವೇಶಿಸುವುದು? ನಮಗೆ ತಿಳಿಯದು.''

ನನ್ನ ಅಭಿಪ್ರಾಯದಲ್ಲಿ ಯೇಸುಕ್ರಿಸ್ತರ ಪ್ರತ್ಯಕ್ಷವಾಗುವಿಕೆ ಅಸಾಧಾರಣವಲ್ಲ. ಅದೊಂದು ಪವಾಡವಲ್ಲ. ಅವರು ಸ್ಥೂಲ ಶರೀರದಿಂದಿರಲಿಲ್ಲವೆಂದು ಇದು ಸೂಚಿಸುವುದೂ ಇಲ್ಲ. ತನ್ನ ಕೈಗಳನ್ನೂ ಪಾರ್ಶ್ವವನ್ನೂ ತೋರಿಸಿ ತಾನು ಸ್ಥೂಲ ಶರೀರ ಹೊಂದಿರುವುದನ್ನು ಅವರು ಸ್ಪಷ್ಟಪಡಿಸಿದರು. ಶಿಷ್ಯರಿಗೆ ಅವರನ್ನು ಕಂಡು ಸಂತೋಷವಾಯಿತು. ಶಿಷ್ಯರು ಯಹೂದ್ಯರಿಗೆ ಹೆದರಿ ಯಾವುದೋ ಕತ್ತಲೆ ತುಂಬಿದ, ಮಣ್ಣಿನಿಂದ ಮಾಡಿದ, ಗುಡಿಸಲಿನಲ್ಲಿ ಒಟ್ಟಾಗಿದ್ದಾಗ ಯೇಸುಕ್ರಿಸ್ತರು ಬಂದುದನ್ನು ಈ ವಚನ ಸೂಚಿಸುತ್ತದೆ. ಯೇಸುಕ್ರಿಸ್ತರು ಶಿಷ್ಯರು ಪ್ರವೇಶಿಸುವಾಗಲೇ ಪ್ರವೇಶ ಮಾಡಿರಲೂ ಬಹುದು. ಆ ಸ್ಥಳಕ್ಕೆ ಅವರ ಆತಿಥೇಯನು (ಯೆರೋಸಲೇಮಿನಲ್ಲಿ ಅವರು ಅತಿಥಿಗಳಾಗಿದ್ದರು) ಅಥವಾ ಯೇಸುಕ್ರಿಸ್ತರ ಎಸ್ಸೀನ್ ಸ್ನೇಹಿತರು ಯಾವುದೋ ಗುಪ್ತ ದ್ವಾರದಿಂದ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿರಬಹುದು ಏಕೆಂದರೆ ಆ ಸ್ಥಳಕ್ಕೆ ಹಲವು ಬಾಗಿಲುಗಳಿದ್ದುವು. ಲೂಕನು ಈ ಸಂಭವವನ್ನು ವಿವರಿಸುತ್ತಾ ಬಾಗಿಲಿನ ವಿಷಯವನ್ನು ಬಿಟ್ಟಿರುವುದರಿಂದ ಈ ಸಂಭವದಲ್ಲಿ ಬಾಗಿಲಿನ ಸ್ಥಾನ ಪ್ರಧಾನವಲ್ಲವೆಂದು ಸೂಚಿಸುತ್ತದೆ. ಇದು ಈ ರೀತಿಯಲ್ಲವಾದರೆ ತಾವೊಂದು ಪ್ರೇತವನ್ನು ನೋಡಿದೆವೆಂಬ ಅವರ ವಿಶ್ವಾಸ ನಿಜಗೊಂಡಂತಾಗುವುದು. ಆದರೆ ಯೇಸುಕ್ರಿಸ್ತರು ಸ್ವತಃ ಈ ಅಭಿಪ್ರಾಯವನ್ನು ಖಂಡಿಸಿರುವರು. ಅವರು ತನ್ನ ಕೈ ಮತ್ತು ಪಾರ್ಶ್ವಗಳನ್ನು ತೋರಿಸಿ ನುಡಿದ ಖಚಿತವಾಕ್ಕುಗಳು ಅವರು ತಾನು ಮಾಂಸ ಮತ್ತು ಎಲುಬಿನಿಂದ ಕೂಡಿದ ಹಿಂದಿನ ಯೇಸುವೇ ಎಂದು ಸ್ಪಷ್ಟಗೊಳಿಸಿವೆ.

ಯೇಸುಕ್ರಿಸ್ತರು ಬಾಗಿಲು ಮುಚ್ಚಿದ ಕೋಣೆಯಲ್ಲಿ ಫಕ್ಕನೆ ಗೋಚರಿಸಿದ ಸಂಗತಿಯ ಕುರಿತು ನಾನು ಮೇಲಿನಂತೆ ಬರೆದ ನಂತರ, ಡೋಕರ್ ಬರೆದ 'ಇಫ್ ಜೀಸಸ್ ಡಿಡ್ ನೋಟ್ ಡೈ ಅಪೋನ್ ದಿ ಕ್ರೋಸ್' (If Jesus did not die upon the cross?) ಎಂಬ ಪುಸ್ತಕ ನೋಡಿದಾಗ ಅದರಲ್ಲಿ ಇದೇ ರೀತಿಯ ವಿವರಣೆ ಕೊಟ್ಟುದಾಗಿ ಕಂಡುಬಂದಿತು. ಅದರ ಲೇಖಕರು ಈರೀತಿ ಬರೆದಿರುತ್ತಾರೆ:— "ಶಿಲುಬೆಗೆ ಕೊಡಲ್ಪಟ್ಟ ನಂತರ ಯೇಸುಕ್ರಿಸ್ತರ ಶರೀರ, ಮುಚ್ಚಿದ ಬಾಗಿಲುಗಳ ಮೂಲಕ ಪ್ರವೇಶಿಸುವುದೇ ಮೊದಲಾದ ಅಮಾನುಷಿಕ ಶಕ್ತಿಗಳಿಂದ ಕೂಡಿದ್ದಿತೆಂದು ಕೆಲವರು ಊಹಿಸುತ್ತಾರೆ... ಆದರೆ ಈ ಊಹೆಗೆ ಸರಿಯಾದ ಆಧಾರಗಳಿಲ್ಲ. ಮೊತ್ತ ಮೊದಲು ಸುವಾರ್ತೆಗಳನ್ನು ವಿರಚಿಸಿದ ಮೂವರು ಲೇಖಕರು ಯೆಸುಕ್ರಿಸ್ತರ ಪ್ರತ್ಯಕ್ಷವಾಗುವಿಕೆಯನ್ನು ವಿವರಿಸುವ ವಚನಗಳಲ್ಲಿ ಯೇಸುಕ್ರಿಸ್ತರು ಸಶರೀರರಾಗಿ ಪ್ರತ್ಯಕ್ಷರಾದರೆಂದೂ ಪ್ರೇತರೂಪಿಯಾಗಿರಲಿಲ್ಲವೆಂದೂ ನಿರೂಪಿಸಲು ಬೇಕಾದ ವಿವರಣೆಗಳನ್ನು ಕೊಟ್ಟಿರುವರು. ಸಂತ ಯೊಹಾನನು (ಸುವಾರ್ತೆಯ ನಾಲ್ಕನೆಯ ಲೇಖಕ) ಸಹ ಯೇಸುಕ್ರಿಸ್ತರು ಮುಚ್ಚಿದ ಬಾಗಿಲುಗಳ ಮೂಲಕ ಪ್ರವೇಶಿಸಿದರೆಂದು ಸ್ಪಷ್ಟವಾಗಿ ಹೇಳುವುದಿಲ್ಲ. ಆತನು ಬರೆದ ವಾಕ್ಯಗಳು ಶಬ್ದಶಃ ಸತ್ಯವೆಂದು ಭಾವಿಸುವುದಾದರೆ, ಯೇಸುಕ್ರಿಸ್ತರು ಗಲಿಲಾಯಕ್ಕೆ ಹೋಗುವ ಮೊದಲು ಯೊರೋಸಲೇಮಿನಲ್ಲಿ ಅಡಗಿದ್ದರೆಂದು ವಿವರಿಸುವುದು ಸರಿಯಾಗಿದೆ. ಅವರು ಬಹಿರಂಗವಾಗಿ ಹೊರಬಂದಿರಲಿಲ್ಲವೆಂಬುದು ಸ್ಪಷ್ಟವಾಗಿ ಬರೆಯಲಾಗಿದೆ. ಅವರು ಜೀವಂತವಾಗಿರುವರೆಂದು ಅಧಿಕಾರಿಗಳಿಗೆ ತಿಳಿದರೆ ಪುನಃ ಬಂಧಿಸಲ್ಪಟ್ಟು ಕೊಲ್ಲಲ್ಪಡುವುದು ಸುಸ್ಪಷ್ಟವಾಗಿದೆ. ಆದುದರಿಂದ ಸಂತ ಯೊಹಾನನು, "ಬಾಗಿಲು ಯಹೂದ್ಯರ ಹೆದರಿಕೆಯಿಂದಾಗಿ'' ಮುಚ್ಚಲ್ಪಟ್ಟಿದ್ದುವೆಂದು ಬರೆದಿರುತ್ತಾನೆ. ಹೀಗೆ ಮುಚ್ಚಲ್ಪಟ್ಟ ಬಾಗಿಲು ಹೊರ ಬದಿಯಲ್ಲಿರುವ ಬಾಗಿಲಾಗಿರಲು ಸಾಧ್ಯವಿದೆ. ಈ ರೀತಿಯ ಅವಿತಿರುವಿಕೆಗೆ ಯೋಗ್ಯವಾದ ಸ್ಥಳ ಅವರ ಸ್ನೇಹಿತರ ಮನೆಯಾಗಿದ್ದರೆ ಮಾತ್ರ ಸಾಧ್ಯ. ಇಲ್ಲಿ ಅವರು ಮತ್ತು ಶಿಷ್ಯರು ಒಟ್ಟಿಗೆ ಸೇರುತ್ತಿರ

ಬಹುದು. ಇಲ್ಲಿಯೇ ಅವರಿಗೆ ಆಹಾರ ದೊರಕಿ ಇಲ್ಲಿಯೇ ಅವರ ಗಾಯಗಳು ಚಿಕಿತ್ಸಿಸಲ್ಪಡಲು ಸಾಧ್ಯವಿದೆ. ಹೊರಬದಿಯ ಬಾಗಿಲು ಮುಚ್ಚಲ್ಪಟ್ಟುದರಿಂದ ಮನೆಯ ಯಾವುದಾದರೊಂದು ಕಡೆಯಿಂದ ಶಿಷ್ಯರು ಸೇರಿದ್ದ ಕೋಣೆಯೊಳಗೆ ಬರಲು ಅಸಾಧ್ಯವಾಗದು. ಶಿಷ್ಯರು ಕೋಣೆಯೊಳಗೆ ಪ್ರವೇಶಿಸುವ ಮೊದಲು ಅವರು ಅವಿತಿದ್ದು ಶಿಷ್ಯರು ಕೋಣೆಯೊಳಗೆ ಪ್ರವೇಶಿಸಿದ ನಂತರ ಹೊರಬಂದು ಅವರ ಮಧ್ಯದಲ್ಲಿ ನಿಂತಿರಲೂ ಬಹುದು........”

ಯೇಸುಕ್ರಿಸ್ತರು ಸಂತ ತೋಮನೊಡನೆ ತನ್ನ ಬೆರಳಿನಿಂದ ಮೊಳೆಯ ಗಾಯವನ್ನು ಸ್ಪರ್ಶಿಸಲು ಹೇಳಿದುದು ಸತ್ಯವಾದರೆ, ಅವರು ತನ್ನ ಸಂಶಯಿಸುವ ಶಿಷ್ಯರಿಗೆ ‘ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ, ನಾನೇ ಅಲ್ಲವೇ.’ ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು, ಅವು ಭೂತಕ್ಕಿಲ್ಲ’ (ಲೂಕ : 24 : 39) ಎಂದು ಹೇಳಿದುದೂ ಸತ್ಯವಾದರೆ, ಅವರು ತನ್ನ ಶಿಷ್ಯರ ಸಾನಿಧ್ಯದಲ್ಲಿ ತಿಂದುದು ಸತ್ಯವಾದರೆ, ಅವರು ಶವಕುಟೀರ ತೊರೆದ ನಂತರ ಒಬ್ಬ ತೋಟಗಾರನಾಗಿ ವೇಷ ಬದಲಾಯಿಸಿದುದು ಸತ್ಯವಾದರೆ ಅವರು ಯೆರೂಸಲೇಮಿನಿಂದ ಗಲಿಲಾಯಕ್ಕೆ ಕಾಲ್ನಡೆಯಲ್ಲಿ ಪ್ರಯಾಣಿಸಿದುದು ಸತ್ಯವಾದರೆ. ಅವರು ಪುನರ್ಬಂಧಿತನಾಗುವುದರ ವಿರುದ್ಧ ಎಲ್ಲಾ ಜಾಗ್ರತೆಗಳನ್ನು ಕೈಗೊಂಡುದು ಸತ್ಯವಾದರೆ, ರಾತ್ರಿಯ ನಂತರ ಹಗಲು ಬರುವುದು ಎಷ್ಟು ಸ್ಪಷ್ಟವೋ ಅಷ್ಟೇ ಸ್ಪಷ್ಟವಾಗಿ ಅವರು ಬಾಗಿಲು ಮುಚ್ಚಿದ ಕೋಣೆಯಲ್ಲಿ ಪ್ರತ್ಯಕ್ಷನಾದುದು ಶಬ್ದಶಃ ಸರಿಯಲ್ಲವೆಂದೂ ಅವರ ಶರೀರ ಮಾಂಸ ಮತ್ತು ಎಲುಬಿನಿಂದ ಕೂಡಿರದ ಸ್ಥೂಲ ಶರೀರವಾಗಿರಲಿಲ್ಲವೆಂದೂ ಸ್ಪಷ್ಟವಾಗುತ್ತದೆ. ಶಿಲುಬೆಯ ಸಂಭವದ ನಂತರ ಅಂದಾಜು ನಲ್ವತ್ತು ದಿವಸಗಳ ನಂತರ ಯೇಸುಕ್ರಿಸ್ತರು ಒಂದು ಮೋಡದ ಮೂಲಕ ಆಕಾಶಕ್ಕೆ ಎತ್ತಲ್ಪಟ್ಟರೆಂಬುದು (ಆ ಸಂಭವವನ್ನು ಶಬ್ದಶಃ ಆ ರೀತಿ ಭಾವಿಸುವುದಾದರೆ) ಸುವಾರ್ತೆಗಳ ಲೇಖಕರು ನಿರೂಪಿಸಿರುವುದು ಬರೇ ಕಟ್ಟುಕಥೆಯೆಂದು ತಿಳಿಯಬೇಕಾಗಿದೆ. ಏಕೆಂದರೆ ಯೇಸುಕ್ರಿಸ್ತರು ಸ್ಥೂಲ ಶರೀರದೊಂದಿಗಿದ್ದರೆಂದು ಸ್ಪಷ್ಟಗೊಂಡಿರುವಾಗ ಕೇವಲ ನೀರಾವಿಯಿಂದ ಕೂಡಿದ ಮೋಡ ಅವರನ್ನು ಸ್ವರ್ಗಕ್ಕೇರಿಸಿತೆಂದು ಹೇಳುವುದು ಮೌಢ್ಯತನವಾಗಿದೆ. ಒಂದು ಮೋಡ ಸ್ಥೂಲ ಶರೀರವನ್ನು ಮೇಲೆತ್ತಲಾರದು. ಮನುಷ್ಯನು ಸ್ಥೂಲ ಶರೀರದಿಂದ ಸ್ವರ್ಗವನ್ನೇರಲಾರನು. ಯೇಸುಕ್ರಿಸ್ತರು ಸೂಕ್ಷ ಶರೀರ ಹೊಂದಿದ್ದರೆ ಅವರ ಸ್ಥೂಲ ಶರೀರವೇನಾಯಿತು ? ಅವರದನ್ನು ಶವಕುಟೀರದಲ್ಲಿ ಬಿಡಲಿಲ್ಲ. ಅವರು ತನ್ನ ಶರೀರದೊಂದಿಗೆಯೇ ತನ್ನ ಮಾತೃದೇಶದಲ್ಲಿ ಶಿಲುಬೆಯ ಸಂಭವದ ನಂತರವಿದ್ದಷ್ಟು ಕಾಲ ತಿರುಗಾಡಿದ್ದರೆಂಬುದನ್ನು ನಾವು ಕಂಡಿರುತ್ತೇವೆ. ಅವರು ತನ್ನ ಸ್ಥೂಲ ಶರೀರದೊಂದಿಗೆ ಸ್ವರ್ಗವನ್ನೇರಿದರೆಂದು (ನಾವು ಮೊದಲೇ ಮೇಲೆ ಬರೆದ ವಿವಿಧ ಲೇಖಕರ ಬೈಬಲ್ ವ್ಯಾಖ್ಯಾನದಿಂದ ಉದ್ಧರಿಸಿ ಬರೆದಂತೆ) ಭಾವಿಸುವುದಾದರೆ ಅದು ಯೇಸುಕ್ರಿಸ್ತರ ವಚನಗಳಿಗೆ ವಿರುದ್ಧವಾಗಿದೆ. ಏಕೆಂದರೆ ಅವರು ಈ ರೀತಿ ನುಡಿದಿರುವರು: “ಸ್ವರ್ಗದಿಂದ ಇಳಿದವನಲ್ಲದೆ ಯಾರೂ ಸ್ವರ್ಗವನ್ನೇರಲಿಲ್ಲ” (ಯೋಹಾನ 3:13). ಇದರಿಂದ ತಿಳಿಯುವುದೇನೆಂದರೆ ಯೇಸುಕ್ರಿಸ್ತರು ಮಾಂಸ, ಎಲುಬಿನಿಂದ ಕೂಡಿದ ಶರೀರದೊಂದಿಗೆ ಆಕಾಶದಿಂದ ಇಳಿದು ಬರದ ಕಾರಣ ಅವರು ಆ ರೀತಿ ಏರಲೂ ಸಾಧ್ಯವಿಲ್ಲ. ಅವರು ಮಾಂಸ ಮತ್ತು ಎಲುಬಿನಿಂದ ಕೂಡಿದ ಸ್ಥೂಲ ಶರೀರದೊಂದಿಗೆ ದೇವರ ಬಲಭಾಗದಲ್ಲಿ ಕುಳಿತಿರುವರೆಂದು ಹೇಳುವುದು ಅನಾಗರಿಕ ಅಂಧವಿಶ್ವಾಸಿಗಳ ನಂಬಿಕೆಗೆ ಅನುಯೋಜ್ಯವಾಗಿದ್ದು ಹಾಸ್ಯಾಸ್ಪದವಾಗಿ ಯಾವುದೇ ಖಂಡನೆಗೆ ಅನರ್ಹವಾಗಿದೆ.

ಸ್ವರ್ಗಾರೋಹಣದ ಕುರಿತು ವಿವರಿಸುವ ಸುವಾರ್ತೆಗಳ ಭಾಗಗಳು ಅವಿಶ್ವಸನೀಯವಾಗಿವೆ. ಮತ್ತಾಯನು ಇದರ ಕುರಿತು ಏನನ್ನೂ ಹೇಳಿಲ್ಲ. ಶವಕುಟೀರದಿಂದ ಹೊರ ಬಂದ ನಂತರ ಯೇಸುಕ್ರಿಸ್ತರು ಗಲಿಲಾಯಕ್ಕೆ ಹೋಗಿ ಮೊದಲೇ ನಿಶ್ಚಯಿಸಿದಂತೆ ಪರ್ವತದ ಸಮೀಪ ಶಿಷ್ಯರನ್ನು ಭೇಟಿಯಾದರೆಂದು ಆತನು ಬರೆದಿರುತ್ತಾನೆ. (ಮತ್ತಾಯ 28 : 16)

ಮಾರ್ಕನು ಯೇಸುಕ್ರಿಸ್ತರು ತನ್ನ ಶಿಷ್ಯರು ಗಲಿಲಾಯದಲ್ಲಿ ತನ್ನನ್ನು ಭೇಟಿಯಾಗುವಂತೆ ಸಂದೇಶ ಕಳುಹಿಸಿದಂತೆ ಬರೆದು ಅನಂತರ ತಾನು ಬರೆದುದಕ್ಕೆ ಯಾವುದೇ ಸಂಬಂಧವೇರ್ಪಡಿಸದೆ, ಯಾವುದೇ ಸ್ಥಳ ವಿವರಣೆ ಕೊಡದೆ ಈ ರೀತಿ ಬರೆದಿರುವನು:

"ಯೇಸುಸ್ವಾಮಿಯು ಅವರೊಡನೆ ಮಾತಾಡಿದ ಮೇಲೆ ಆಕಾಶಕ್ಕೆ ಒಯ್ಯಲ್ಪಟ್ಟು ದೇವರ ಬಲಗಡೆಯಲ್ಲಿ ಆಸನಾರೂಢನಾದನು'' (ಮಾರ್ಕ 16 : 19). ಕೊನೆಯ ವಾಕ್ಯ, ದೇವರ ಬಲಗಡೆಯಲ್ಲಿ ಆಸನಾರೂಢನಾದ ನೆಂಬುದು ಪೂರ್ಣ ಹೇಳಿಕೆಯನ್ನು ಕ್ಷೀಣಗೊಳಿಸುತ್ತದೆ. ಲೇಖಕನು ಸ್ವತಃ ಸ್ವರ್ಗಕ್ಕೆ ಹೋಗಿ ಯೇಸುಕ್ರಿಸ್ತರನ್ನು ದೇವರ ಬಲಭಾಗದಲ್ಲಿ ಕುಳಿತಿರುವುದಾಗಿ ಕಂಡುದು ಅಸಂಭಾವ್ಯವಾಗಿದೆ. ಮಾರ್ಕನ ಸುವಾರ್ತೆಯ ಕೊನೆಯ 12 ವಚನಗಳ ಕುರಿತು, ದಿ ಎನ್ ಸೈಕ್ಲೋಪೀಡಿಯ ಬ್ರಿಟಾನಿಕ ಈರೀತಿ ಅಭಿಪ್ರಾಯ ವ್ಯಕ್ತಗೊಳಿಸಿದೆ:- ''ಮೂಲ ಗ್ರಂಥಕ್ಕೆ ಈ ವಚನಗಳು, ಅನಂತರ ಅಂದಾಜು ಎರಡನೆಯ ಶತಮಾನದ ಆದಿಭಾಗದಲ್ಲಿ, ಅದರ ಕೊನೆಯ ಭಾಗ ನಷ್ಟವಾದುದನ್ನು ಸರಿಪಡಿಸಲಿಕ್ಕಾಗಿಯೋ ಅಥವಾ ನ್ಯೂನತೆ ದೂರಪಡಿಸಲಿಕ್ಕಾಗಿಯೋ ಸೇರಿಸಲ್ಪಟ್ಟುವು." (The Encyclopaedia Britannica Ed II, Vol 17 page 130). ಆದುದರಿಂದ ಮಾರ್ಕನ ನಿರೂಪಣೆ ಯಾವುದೇ ಧಾರ್ಮಿಕ ವಿಶ್ವಾಸಕ್ಕೆ ತಳಹದಿಯಾಗಲು ಸಾಧ್ಯವಿಲ್ಲ.

ಸಂತ ಲೂಕನು ಈ ರೀತಿ ಬರೆದಿರುವನು:-"ಮತ್ತು ಆತನು ಅವರನ್ನು ಬೆಥಾನ್ಯದ ತನಕ ಕರಕೊಂಡು ಹೋಗಿ ತನ್ನ ಕೈಗಳನ್ನು ಎತ್ತಿ ಅವರನ್ನು ಆಶೀರ್ವದಿಸಿದನು. ಆಶೀರ್ವದಿಸುತ್ತಿರುವಾಗ ಅವರನ್ನು ಬಿಟ್ಟು ಸ್ವರ್ಗಕ್ಕೆ ಒಯ್ಯಲ್ಪಟ್ಟನು'' (ಲೂಕ 24:50, 51).

ಸಂತ ಲೂಕನ ಪ್ರಕಾರ ಯೇಸುಕ್ರಿಸ್ತರು ಬೆಥಾನ್ಯದಲ್ಲಿ ಶಿಷ್ಯರಿಂದ ಬೇರ್ಪಟ್ಟರು. ಇದರಿಂದ ಅವರು ಸ್ವರ್ಗಾರೋಹಣ ಗೈದುದು ಶಿಷ್ಯರು ನೋಡಿದರೆಂದು ವ್ಯಕ್ತವಾಗುವುದಿಲ್ಲ.

'ಅಪೋಸ್ತಲರ ಕೃತ್ಯಗಳ'ಲ್ಲಿ ಈ ರೀತಿ ಬರೆದಿದೆ: "ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದಹಾಗೆ ಆತನು ಏರಿಸಲ್ಪಟ್ಟನು; ಮೋಡವು ಆತನನ್ನು ಕವಿದುಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು." (1 : 9).

ಕಣ್ಣಿಗೆ ಕಾಣಿಸದಂತಾದುದರಿಂದ ಅವರು ಸ್ವರ್ಗಾರೋಹಣಗೈದರೆಂದು ಹೇಳುವುದು ಸರಿಯಾಗದು. ಅವರು ಪರ್ವತದ ಶಿಖರವನ್ನೇರಿದುದರಿಂದ ಶಿಖರವು ಮೋಡ ಮತ್ತು ಮಂಜುನಿಂದ ಮುಸುಕಿದ್ದುದರಿಂದ ಶಿಷ್ಯರಿಗೆ ಅವರು ಮರೆಯಾಗಿರಲು ಸಾಧ್ಯ. ಪರ್ವತದ ಇನ್ನೊಂದು ಬದಿಯಿಂದ ಇಳಿದು, ರಾಜ್ಯವನ್ನು ತೊರೆದು ಯಹೂದ್ಯರ ವಿರೋಧ ಮತ್ತು ಕುಹಕ ಕೃತ್ಯಗಳಿಂದ ರಕ್ಷಣೆ ಗಳಿಸಲು ಅವರು ಪ್ರಯತ್ನಿಸಿದುದು ಸಾಧ್ಯವಿದೆ.

ಯೋಹಾನನು ಇದನ್ನು ಸ್ಥಿರೀಕರಿಸುತ್ತಾನೆ. ಯೇಸುಕ್ರಿಸ್ತರು ಕೊನೆಯ ಬಾರಿ ಶಿಷ್ಯರನ್ನು ಟೈಬೇರಿಯಸ್ ಸಮುದ್ರದ ಬಳಿಯಲ್ಲಿ ಭೇಟಿಯಾಗಿ ಪೇತ್ರನೊಡನೆ, ''ನನ್ನ ಕುರಿಗಳನ್ನು ಸಾಕು'' ಎಂದು ಹೇಳಿದರು. ''ನನ್ನನ್ನು ಹಿಂಬಾಲಿಸು'' ಎಂದು ಹೇಳಿದಾಗ ಯೇಸುಕ್ರಿಸ್ತರಿಗೆ ಪ್ರಿಯವಾಗಿದ್ದ ಶಿಷ್ಯನು ಹಿಂಬಾಲಿಸುವುದನ್ನು ಪೇತ್ರನು ಕಂಡನು (ಯೋಹಾನ 21:16-20). ಯೋಹಾನನ ಸುವಾರ್ತೆಯ ಈ ಕೊನೆಯ ವಚನಗಳು ಯೇಸುಕ್ರಿಸ್ತರು ಸ್ವರ್ಗಾರೋಹಣ ಗೈಯ್ಯಲಿಲ್ಲವೆಂದೂ ಬೇರೆ ಯಾವುದೋ ರಾಜ್ಯಕ್ಕೆ ವಲಸೆ ಹೋದರೆಂದೂ ವ್ಯಕ್ತಗೊಳಿಸುತ್ತವೆ.

ಆದುದರಿಂದ ಮತ್ತಾಯನ ಮತ್ತು ಯೋಹಾನನ ಸುವಾರ್ತೆಗಳು ಈ ಸಿದ್ಧಾಂತವನ್ನು ಶಕ್ತಿಯುಕ್ತವಾಗಿ ಬೆಂಬಲಿಸುತ್ತಿವೆಯೆಂದೂ ಸ್ವರ್ಗಾರೋಹಣದ ಕುರಿತು ಇವೆರಡೂ ಮೌನವನ್ನು ಸೂಚಿಸುತ್ತವೆಯೆಂದೂ ಸ್ಪಷ್ಟವಾಗುತ್ತದೆ.

ಮಾರ್ಕನ ಸುವಾರ್ತೆಯಲ್ಲಿ ಬರೆದ ಸ್ವರ್ಗಾರೋಹಣ ನಿರೂಪಣೆಯು ಮೂಲಗ್ರಂಥದಲ್ಲಿ ಯಾರೋ ಅಜ್ಞಾತ ವ್ಯಕ್ತಿ ಸೇರಿಸಿದ ಭಾಗವಾಗಿದೆ. ಲೂಕನು ಯೇಸುಕ್ರಿಸ್ತರ ಸ್ವರ್ಗಾರೋಹಣವನ್ನು ಅಸ್ಪಷ್ಟವಾಗಿ ಸೂಚಿಸುತ್ತಾನೆ; ಆದರೆ ಯೇಸುಕ್ರಿಸ್ತರು ಶಿಷ್ಯರನ್ನು ಕೊನೆಯ ಬಾರಿ ಸಂಧಿಸಿ ಬೀಳ್ಕೊಟ್ಟಾಗ ಆತನು ಉಪಸ್ಥಿತನಾಗಿರಲಿಲ್ಲ.

ಸುವಾರ್ತೆಗಳ ಲೇಖಕರು ತಮ್ಮ ಹೇಳಿಕೆಗಳಲ್ಲಿ ಪ್ರಧಾನ ವಿಷಯದ ಕುರಿತು ಭಿನ್ನಾಭಿಪ್ರಾಯಗಳನ್ನು ಕೊಟ್ಟು ಅವಿಶ್ವಸನೀಯರಾಗಿ ಕಾಣುತ್ತಾರೆ. ಇಬ್ಬರು ಅವರನ್ನು ಬೆಥಾನ್ಯದಲ್ಲಿ ಓಲಿವ್ ಪರ್ವತದಿಂದ ಸ್ವರ್ಗಕ್ಕೆ ಕಳುಹಿಸುತ್ತಾರೆ. ಮೂರನೆಯವನು ಸ್ಥಳ ನಿರ್ಣಯಿಸದೆ ಯೆರೂಸಲೇಮಿನಿಂದ ಸ್ವರ್ಗಕ್ಕೆ ಕಳುಹಿಸುತ್ತಾನೆ. ಮತ್ತಾಯನು ಅವರು ಗಲಿಲಾಯಕ್ಕೆ ಹೋಗಿ ಶಿಷ್ಯರನ್ನು ಕಂಡರೆಂದೂ ಯೋಹಾನನು ಅವರು ಶಿಷ್ಯರನ್ನು ಟೈಬೇರಿಯಸ್ ಸಮುದ್ರದ ಸಮೀಪ ಕಂಡು

ದೂರ ಹೋದರೆಂದೂ ಬರೆದಿರುವರು.

(Weigal) ವೀಗಲ್ ಈ ರೀತಿ ಬರೆದಿರುವನು:

"ಸ್ವರ್ಗಾರೋಹಣವು ಆದಿಕಾಲದ ಕ್ರೈಸ್ತ ಬರಹಗಳಲ್ಲಿ ಒಂದಾದ ಪತ್ರಿಕೆಗಳಲ್ಲಿ (Epistles) ಸೂಚಿಸಲ್ಪಟ್ಟಿಲ್ಲ. ಅದು ಪ್ರಥಮವಾಗಿ ವಿರಚಿತವಾದ 'ಮಾರ್ಕನ ಸುವಾರ್ತೆ'ಯಲ್ಲೂ ಸೂಚಿತವಾಗಿಲ್ಲವೆಂದೇ ಹೇಳಬಹುದು. ಏಕೆಂದರೆ 'ಆತನು ಸ್ವರ್ಗಕ್ಕೆ ಎತ್ತಲ್ಪಟ್ಟನು' ಎಂಬ ವಾಕ್ಯ ಅಸ್ಪಷ್ಟವಾಗಿದ್ದು, ಅವು ಮಾರ್ಕನ ಸುವಾರ್ತೆಯಲ್ಲಿ ಅನಂತರದ ಸೇರಿಸುವಿಕೆಯೆಂದು ಎಲ್ಲಾ ಬೈಬಲ್ ಪಂಡಿತರಿಂದ ನಿರ್ಣಯಿಸಲ್ಪಟ್ಟ ಹನ್ನೆರಡು ವಚನಗಳಲ್ಲಿ ಒಂದಾಗಿದೆ." ಅನಂತರ ಈ ರೀತಿ ಬರೆದಿರುವನು:

"ಈ ರೀತಿಯ ಸ್ವರ್ಗಾರೋಹಣ ಪುರಾಣ ಕಥೆಗಳು ಪ್ರಾಚೀನ ದೇವತೆಗಳ ಜೀವನದ ಕೊನೆಯ ಸಂಭವವಾಗಿದ್ದು ಎಲಿಜಾನ (Elijah) ಪುರಾಣ ಕಥೆಯಲ್ಲೂ ಈ ಸಂಭವವನ್ನು ಕಾಣಬಹುದು. ಕ್ರೈಸ್ತ ಧರ್ಮ ಅನಂತರ ಪ್ರಚಾರಗೊಂಡ ದೇಶದಲ್ಲಿ ಎಡೋನಿಸ್ ದೇವನ ಅರ್ಚನೆಯು ಜಾರಿಯಲ್ಲಿದ್ದು ಆತನು ತನ್ನ ಅನುಯಾಯಿಗಳ ಸಾನ್ನಿಧ್ಯದಲ್ಲಿ ಪುನರುತ್ಥಾನದ ನಂತರ ಸ್ವರ್ಗಾರೋಹಣ ಗೈದುದಾಗಿ ಭಾವಿಸಲಾಗುತ್ತಿತ್ತು. ಹೆರಾಕ್ಲಿಸ್, ಹೈಯಾಸಿಂಥ್, ಕೃಷ್ಣ, ಮಿತ್ರ ಮೊದಲಾದವರು ಸಹ ಇದೇ ರೀತಿ ಸ್ವರ್ಗವನ್ನೇರಿದರು."
(Paganism in our Christianity, Page 99-101)
—weigal

ಸ್ವರ್ಗಾರೋಹಣವನ್ನು ಇಂತಹ ಬಲಹೀನ ಆಧಾರದ ಮೇಲೆ ಸ್ಥಾಪಿಸುವುದು ತಪ್ಪೆಂದು ನಮ್ಮ ತೀರ್ಮಾನವಾಗಿದೆ.

## Read Ahmadiyya Periodicals in Different Languages to Study Different Religions

# BADR

URDU WEEKLY ORGAN

Single Copy: 30 Paise. Annual Subscription: Rs. 15/-

Apply to: **The Manager, Badr Weekly**

**QADIAN—143516.**

# MINARET

ENGLISH QUARTERLY JOURNAL

Single Copy: Rs. 1/- Annual Subscription; Rs. 4/-

Apple to: **The Manager, Minaret Quarterly,**

Ahmadiyya Building, West Silk Street,

**CALICUT—673001.**

# SATHYADOOTHAN

MALAYALAM FORTNIGHTLY ORGAN

Single Copy: 35 Paise. Annual Subscription: Rs. 8/-

Apply to: **The Manager, Sathyadoothan Fortnightly**

**CANNANORE—670001.**

# SAMADHANA VAZHI

TAMIL MONTHLY ORGAN

Single Copy: 25 Paise. Annual Subscription: Rs. 3/-

Apply to: **The Manager, Samadhana Vazhi Monthly**

**55, Harris Road, MADRAS — 600002.**

# ಸಂಪಾದಕರಿಗೆ ಪತ್ರ

ಮಾನ್ಯ ಸಂಪಾದಕರೆ,

ತಾವು ನನ್ನ ಮೇಲೆ ವಿಶ್ವಾಸವಿರಿಸಿ ಕಳುಹಿಸಿದ 'ಯುಗರಶ್ಮಿ'ಯ ಎಲ್ಲಾ ಪ್ರತಿಗಳೂ ಕೈಸೇರಿವೆ. ಆದರೆ ಕಾರಣಾಂತರದಿಂದ ಅದಕ್ಕೆ ಈ ತನಕ ಕೃತಜ್ಞತೆಗಳನ್ನು ಕಳುಹಿಸಲು ಸಾಧ್ಯವಾಗದೆ ಹೋದುದಕ್ಕೆ ವಿಷಾದಿಸುತ್ತೇನೆ.

ಜಾತ್ಯಾತೀತ ರಾಷ್ಟ್ರದಲ್ಲಿ, ಮಾನವ ನಿರ್ಮಿತ ಮತೀಯ ಅಜ್ಞಾನವಿರುವ ಈ ವೇಳೆಯಲ್ಲಿ ಭಿನ್ನಧರ್ಮೀಯರಲ್ಲೂ ಸ್ನೇಹ ಬೆಳಸಲಿಕ್ಕಾಗಿ 'ಯುಗರಶ್ಮಿ' ಮಾಡುತ್ತಿರುವ ಪ್ರಯತ್ನ ಸ್ವಾಗತಾರ್ಹವಾದುದು.

ಎಲ್ಲಾ ಸಹೃದಯರಂತೆ ನಾನೂ ನಿಮ್ಮ ಪತ್ರಿಕೆಗೆ ಅಗತ್ಯದ ಸಹಾಯವನ್ನು ಮಾಡಲು ತಯಾರಿರುವೆನು.

ದಿನದಿಂದ ದಿನಕ್ಕೆ 'ಯುಗರಶ್ಮಿ'ಯ ಓದುಗರ ಸಂಖ್ಯೆ ಹೆಚ್ಚಿ, ಕರ್ನಾಟಕದಾದ್ಯಂತ ಮಾತ್ರವಲ್ಲ ನೆರೆಯ ರಾಜ್ಯಗಳಲ್ಲೂ ಜನಪ್ರಿಯವಾಗಲಿ ಎಂದು ಹಾರೈಸುವ,

ನಿಮ್ಮವ,

**ಪೊಯಕ್ಕರ ಕೆ. ಗಣೇಶ್**, ಕಾಸರಗೋಡು.

ಮಾನ್ಯರೆ,

ನೀವು ಕಳಿಸಿದ 'ಯುಗರಶ್ಮಿ' ಪತ್ರಿಕೆಗಳು ಮುಟ್ಟಿದವು. ಇಸ್ಲಾಂ ಮತ ತತ್ವ ವಿಷಯಕ ಪತ್ರಿಕೆಗಳ ಅಭಾವ ಕನ್ನಡದಲ್ಲಿದ್ದು ಅದನ್ನು ನೀವು ದೂರ ಮಾಡಿದ್ದೀರಿ. ಉರ್ದು ಬಾರದ ನನ್ನಂಥ ಕನ್ನಡಿಗನಿಗೆ ಈ ಪತ್ರಿಕೆ ತುಂಬ ಉಪಯುಕ್ತವಾಗಿದೆ. ಎಲ್ಲ ಮತದ ಜನರಲ್ಲಿ ಭಾವೈಕ್ಯತೆಯನ್ನು ಬೆಳೆಸಲು, ಪವಿತ್ರ ಮತ್ತು ಪ್ರಾಮಾಣಿಕ ಇಸ್ಲಾಂ ಧರ್ಮದ ಸಂದೇಶವನ್ನು ಬೀರಲು ನಿಮ್ಮ 'ಯುಗರಶ್ಮಿ' ತುಂಬ ಸಹಾಯಕವಾಗಿದೆ. ಹಿಂದೂ-ಮುಸ್ಲಿಮರಲ್ಲಿ ಐಕ್ಯತೆಯನ್ನು ಬೆಳೆಸಿ ಭಾರತದ ಭದ್ರತೆಗೆ-ಪ್ರಗತಿಗೆ ಬುನಾದಿಯಾಗಿ ಈ ಪತ್ರಿಕೆ ಪ್ರಯತ್ನಿಸುವುದೆಂದು ನಾನು ಭರವಸೆ ತಾಳಿದ್ದೇನೆ.

'ಯುಗರಶ್ಮಿ' ಕನ್ನಡಕ್ಕೂ ಕನ್ನಡದಾಚೆಗೂ ತನ್ನ ಬೆಳಕಿನ ಕಿರಣಗಳಿಂದ ಬೆಳಗಿ, ಎಲ್ಲ ಬಂಧುಗಳ ಹೃದಯದಲ್ಲಿಯೂ ಪ್ರಕಾಶವನ್ನು ಬೀರಲಿ ಎಂದು ಬಯಸುತ್ತೇನೆ. ಎಲ್ಲ ರೀತಿಯಿಂದ ನಿಮಗೆ ಯಶ ದೊರೆಯಲಿ.

**ದು. ನಿಂ. ಬೆಳಗಲಿ,**

'ಕೃತೀ' ಸೌರಭ, ಬನಹಟ್ಟಿ (ಜಿ. ವಿಜಾಪುರ).

(ದು. ನಿಂ ಬೆಳಗಲಿ ಇವರು ಮಕ್ಕಳ ಸಾಹಿತ್ಯದಲ್ಲಿ ಈ ವರ್ಷ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿರುವರು. —ಸಂಪಾದಕ).

## "ಯುಗರಶ್ಮಿ"ಗೆ ಚಂದಾದಾರರಾಗಿರಿ

**ವಾರ್ಷಿಕ ಚಂದಾ : ನಾಲ್ಕು ರೂಪಾಯಿಗಳು**

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly,
April - June 1976 / Shahadath - Ihsan 1355


# BOOKS ON ISLAM AND CONTEMPORARY RELIGIONS

1. **Holy Quran with Arabic Text and English Translation** 12-00
2. **Ahmadiyyat or The True Islam** 8-00
   By Hazrat Mirza Bashiruddin Mahmud Ahmad
3. **New World Order** 2-25
   By Hazrat Mirza Bashiruddin Mahmud Ahmad.
4. **The Teachings of Islam** 6-00
   By Hazrat Ghulam Ahmad
5. **Our Foreign Missions** 2-25
   By Mirza Mubarak Ahmad
6. **Where did Jesus Die?** 2-25
   By J. D. Shams
7. **The Tomb of Jesus** 0-75
   By sufi M. R. Bengali
8. **Jesus in India** 2-25
   By Mirza Ghulam Ahmad
9. **The Christian Doctrine of Atonement** 1-50
   By Dr. Mufti Muhammad Sadiq.
10. **An Interpretation of Islam** 1-50
    By Prof. Dr. Laura Veccia Vaglieri

Write to

**NAZIR DAWAT-O-TABLIGH**

**P. O. QADIAN - 143516. (Punjab)**


Printed by: A. B. Sunder Ram Shetty, at Aruna Printing Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore, at 23/1003 Ansari Road, Bundar, Mangalore-575001.